ಸರ್ಕಾರಕ್ಕೆ ಬಂದಿದೆ ಅದು ಸಂಪೂರ್ಣವಾಗಿ ಅಸತ್ಯವಾದುದು ಎಂದು ಇದರ ಮೇಲೆ ಗೊತ್ತಾಗುತ್ತದೆ. ಎರಡನೆಯದು ಸಬ್ ಇನ್ಸ್‌ಪೆಕ್ಟರ್‌ರವರಿಗೆ ಪೆಟ್ಟು ಆದಮೇಲೆ ಅವರು ಗೌರ್ನಮೆಂಟ್ ವೆನ್‌ಲಕ್ ಆಸ್ಪತ್ರೆಗೆ. ಅಡ್ಮಿಟ್ ಆಗಿ ಡಿಸ್ಚಾರ್ಜ್ ಆಗಿದ್ದಾರೆ. ಅದೇ ಆಸ್ಪತ್ರೆಗೆ ರಾಘವ ಕೋಟ್ಯಾನ್ ಮತ್ತು ಭಾಸ್ಕರ ಸಮಿತ–Panchayat Chairman who is killed in the incident ಕೂಡ ಅಡ್ಮಿಟ್ ಆಗಿದ್ದಾರೆ. ಮೂರು ಜನರೂ ಈ ವೆನ್‌ಲಕ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು. ಸಿಬ್ಬಂದಿಯೊಡನೆ ಠಾಣೆಗೆ ಬಂದಿದ್ದನೆ. ಆಸ್ಪತ್ರೆಯಲ್ಲಿ ಅಡ್ಮಿಟ್‌ಆಗಿ ಡಿಸ್ಚಾರ್ಜ್ ಆಗಿ ಬಂದಿದ್ದೇನೆ ಎಂದು ಅಲ್ಲಿ ಬರೆದಿದ್ದಾರೆ. ಹೆಡ್ ಕಾನ್ಸ್‌ಟೇಬಲ್ ಏನು ಇದ್ದಾನೆ, ಇವನು ಹೋಗಿದ್ದು ಬಿಡಿಸುವುದಕ್ಕೆ ಹೋಗಿದ್ದಾನೆ. ತಮ್ಮ ಪ್ರಕಾರ On the basis of the complaint lodged in writing by so aud so this case is registered under Crime No...etc., ಎಂದು ಹೇಳಿದ್ದೀರಿ, I admit...ಇದರ ಪ್ರಕಾರ ಇನ್‌ವೆಸ್ಟಿಗೇಷನ್ ಮುಂದುವರೆಸುತ್ತೇವೆ ಎಂದು ತಾವು ಏತಕ್ಕೆ ತಿಳಿಸಲಿಲ್ಲ ? ಅನಂತರ ಮಾನ್ಯ ಅಧ್ಯಕ್ಷರೇ, ಇನ್ನು ಅನೇಕ ವಿಷಯಗಳು ಇದರಲ್ಲಿ ಅಡಗಿವೆ. ಸಬ್ ಇನ್ಸ್‌ಪೆಕ್ಟರ್, ಪೋಲೀಸ್ ಕಾನ್‌ಸ್ಟೇಬಲ್ ಹೆಡ್ ಕಾನ್‌ಸ್ಟೇಬಲ್ ಹೆಸರು ಗೋಪಾಲ ಶೆಟ್ಟಿ ಎಂದು ಇದೆ. ಅನಂತರ ಸಬ್ ಇನ್ಸ್‌ಪೆಕ್ಟರ್ ಎದುರಿಗೆ ಘಾಯಗೊಂಡಿದ್ದ ಸವಿತಾ ಇದ್ದರೂ ಕೂಡ Why Samitha was not taken to the Hospital by the Sub-Inspector himself ? I am posing this question to the Treasury Benches. There was no stabbing injuries to the Head Constable, nor to any Police Constable nor to any person including Raghava Kotiyan., except Samitha. Stabbing to some stomach protion or so is very serious. ಈ ಒಂದು ಸೀರಿಯಸ್‌ನೆಸ್ ಬಗ್ಗೆ ಪೋಲೀಸಿನವರಿಗೆ ಗಮನವಿಲ್ಲ. ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರತಕ್ಕದ್ದನ್ನು ತಿಳಿದುಕೊಂಡೂ ಹೋಗಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಮಾನ್ಯ ಸಚಿವರು ಇದನ್ನು ಒಪ್ಪಿಕೊಳ್ಳಬೇಕು. ಎವಿಡೆನ್ಸ್ ಪ್ರಶ್ನೆ ಬೇರೆ. ಮೊದಲು ಈ ವಿಷಯ ಒಪ್ಪಿಕೊಳ್ಳಬೇಕು ಘಾಯಗೊಂಡ ವ್ಯಕ್ತಿಗಳನ್ನು ಮೊದಲು ಏತಕ್ಕೆ ವೆನ್‌ಲಕ್ ಆಸ್ಪತ್ರೆಗೆ ಕಳುಹಿಸುವ ಕೆಲಸವನ್ನುಸಬ್ ಇನ್ಸ್‌ಪೆಕ್ಟರ್‌ರವರು ಮಾಡಲಿಲ್ಲ ? ಅವರೇ ಹೋಗಿ ಅಡ್ಮಿಟ್ ಆಗುವ ಹಾಗೆ ಮಾಡಿದ್ದೀರಿ ?

NOTICE OF AN ADJOURNMENT MOTION

***re* : Discussion on the matter relating to the Incident in which Sri Bhasker Samitha, V. P. Chairman died at Peduperara village, Mangalore Taluk**

MADAM SPEAKER.—After hearing the Hon'ble members and the Minister I have reconsidered my decision and I shall give my Consent to the Adjournment Motion. The Hon. Leader of the Opposition may ask the leave of the House.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಷಯವನ್ನು ನಿಲುವಳಿ ಸೂಚನೆ ಮುಖೇನ ತರಲಿಕ್ಕೆ ಅನುವು ಮಾಡಿಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ನಮಸ್ಕಾರ ಮಾಡುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾಗಿರತಕ್ಕ ಶ್ರೀಮಾನ್ ಬಂಗಾರಪ್ಪನವರು ಮಾತನಾಡುತ್ತಿದ್ದಾರೆ. ಅವರು ಮುಗಿಸಿದ ಮೇಲೆ ನಾನು ಮಾತನಾಡುತ್ತೇನೆ.

MADAM SPEAKER.—Is there any objection for leave being granted for moving the Motion from the Government ?

Sri S. M. KRISHNA.--No. I think, a date has to be fixed for the discussion of the Adjournment Motion,

MADAM SPEAKER.—Let the discussion on the Adjournment Motion to continued now.

Sri S. M. KRISHNA.—I have no objection.

Sri S BANGARAPPA.—I beg to move.

"That this August House do now adjourn"

MADAM SPEAKER.—Motion Moved :

"That this House do now adjourn"

The hon. Member Sri S. Bangarappa may conrinue his speech.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಮೊಟ್ಟ ಮೊದಲನೆಯದಾಗಿ ಈ ನಿಲುವಳಿ ಸೂಚನೆ ಚರ್ಚೆಗೋಸ್ಕರ ತಾವು ಅನುಮತಿ ಕೊಟ್ಟಿದ್ದಕ್ಕಾಗಿ ಈ ಸದನದ ಸದಸ್ಯರಿಗೆ ಅಭಿನಂದಿಸುತ್ತೇನೆ. ಇದರ ಪ್ರಾಮುಖ್ಯತೆ ಏನು, ಏತಕೆ, ಎನ್ನತಕ್ಕಂಥಾದ್ದು ನಮ್ಮ ಮುಂದೆ ಇರುವ ಪ್ರಶ್ನೆ ರಾಜ್ಯದಲ್ಲಿ ಯಾರೋ ಎರಡು ಜನಗಳು ಮಾತ್ರ ಒಂದು ವಿಷಯದ ಬಗ್ಗೆ ಜಗಳ ಮಾಡಿ ಕೊಂಡು ಸ್ಟ್ಯಾಬಿಂಗ್ ಆದರೆ, ಮತ್ತೊಂದು ಆದರೆ, ಘಟನೆಗಳು ನಡೆದರೆ, ನಿಲುವಳಿ ಸೂಚನೆ ಮುಖಾಂತರ ಈ ಒಂದು ಸದನದಲ್ಲಿ ಚರ್ಚೆಗೆ ಬರುವುದಕ್ಕೆ ಅವಕಾಶ ಇಲ್ಲ ಎನ್ನುವ ವಿಷಯ ನಮಗೂ ಕೂಡ ಗೊತ್ತಿದೆ. ಇಲ್ಲಿ ಪ್ರಾಮುಖ್ಯತೆಯು ಅರಿವು ಹೇಗೆ ಬಂದಿವೆ ಎಂದರೆ, ಸಂಪೂರ್ಣವಾಗಿ ಈ ವಿಷಯವನ್ನು ಮೇಲಿಂದ ಕೊನೆಯವರೆಗೆ ನೋಡಿದಾಗ, ಪೋಲೀಸ್ ಅಧಿಕಾರಿಗಳು, ರಕ್ಷಣಾ ಇಲಾಖೆಯ ಅಧಿಕಾರಿಗಳೂ ಕೂಡ ಅಲ್ಲಿ ಇದ್ದರು ಎಂಬುದರಿಂದ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಇದಕ್ಕೆ ಮುಖ್ಯ ಕಾರಣ ಇಷ್ಟೆ. ರಕ್ಷಣಾ ಇಲಾಖೆಯವರು ಅವರ ಹೆಸರೇ ಸೂಚಿಸುವಂತೆ ರಕ್ಷಣೆ ಮಾಡಬೇಕು. ತಕರಾರಿನ ಬಗ್ಗೆ ನ್ಯಾಯ ಅನ್ಯಾಯ ಯಾರದು ಅನ್ನತಕ್ಕ ವಿಮರ್ಶೆ ಅಥವಾ ಇತ್ಯರ್ಥ ಆಗುವ ಮೊದಲು, ಕುತೂಹಲಕಾರಿಯಾದ ಕಾನೂನು ಬಾಹಿರ ಘಟನೆಗಳು ನಡೆಯುವುದಕ್ಕೆ ಅವಕಾಶ ಕೊಡದ ಹಾಗೆ ನೋಡಿಕೊಳ್ಳುವುದು ಪೋಲೀಸಿನವರ ಕರ್ತವ್ಯ. ಇಲ್ಲಿ ಭಾಸ್ಕರ ಸಮಿತ ಆಗಿರಲಿ, ರಾಘವ ಕೋಟ್ಯಾನ್ ಆಗಿರಲಿ, ಇವರ ಜಗಳ ಲಿಂಗಪೂಜಾರಿ, ರಾಘವ ಕೋಟ್ಯಾನ ಗೇಣಿ ಬಗ್ಗೆ. ಜಮೀನು ಏನು ಇದೆ ಇದರ ಗೇಣಿ ಹಕ್ಕು ಯಾರಿಗೆ ಸೇರಿದೆ ಎನ್ನುವುದು ಪ್ರಾರಂಭ ವಿಷಯ, ನಾನು ಇವತ್ತು ಸಿವಿಲ್ ರೈಟ್ಸ್ ಬಗ್ಗೆ ಹೇಳಲು ಹೋಗುತ್ತಾ ಇಲ್ಲ. ಈ ಸದನಕ್ಕೆ ಅದಕ್ಕೂ ಸಂಬಂಧವಿಲ್ಲ ಎನ್ನುವ ಭಾವನೆ ಹೊಂದಿದ್ದೇನೆ. ಅದಕ್ಕೆ ತೀರ್ಪು ಕೊಡುವುದಕ್ಕೆ ಬೇರೆ ನ್ಯಾಯಾಲಯಗಳು ಇವೆ. ಆದರೆ ಈ ಸಂಬಂಧದಲ್ಲಿ ನಮಗೆ ಸಿಕ್ಕಿರತಕ್ಕ ದಾಖಲೆಗಳು ಎಷ್ಟು ಇವೆ ಎಂದರೆ we have got almost all the certified and photo-stat copies, of the documents. ಎಂಟೈರ್ ಫೈಲ್ ಇದೆ. ಇದನ್ನು ತಮ್ಮ ಅವಗಾಹನೆಗೆ ಕಳುಹಿಸಿ ಕೊಡುತ್ತೇನೆ. ಇದರ ಪ್ರಕಾರ ರಾಘವ ಕೋಟ್ಯಾನ್ ಅತನು ಕೂಡ ಗೇಣಿದಾರ, ಜಮೀನು ಇದೆ. Survey No. 65/38 and 65/17 A of this Pedupperera village of the South Kanara District, Mangalore Taluk. ಈ ಜಮೀನಿಗೆ ಸಂಬಂಧಪಟ್ಟ ಹಾಗೆ ಗೇಣಿ ಹಕ್ಕು ಯಾರದು ಅನ್ನುವ ಬಗ್ಗೆ ಹೆಚ್ಚಿನ ಆಳವಾಗಿ ಹೋಗಬೇಕಾಗಿಲ್ಲ. ರಾಘವ ಕೋಟ್ಯಾನ್ ಲಿಂಗಪೂಜಾರಿ ಗೇಣಿ ಬಗ್ಗೆ ಕೋರ್ಟಿನಲ್ಲಿ ತೀರ್ಮಾನ ಕೊಟ್ಟಿದ್ದಾರೆ.

ಭಾಸ್ಕರ ಸಮಿತ ಎನ್ನುವವರು ಪಂಚಾಯತಿ ಅಧ್ಯಕ್ಷರು ಆಗಿದ್ದಾರೆ. ನಮಗೆ ಕೊಟ್ಟಿರುವ ವರದಿ ರೀತ್ಯ ಭಾಸ್ಕರ ಸಮಿತ ಅವರು ಪಂಚಾಯತಿ ಅಧ್ಯಕ್ಷರು, ಹಾಗೂ ಬಿ. ಎಸ್. ಸಿ. (ಎ. ಜಿ.) ಪದವೀಧರರು. ಅಗ್ರಿಕಲ್ಚರಲ್ ವಿಷಯದಲ್ಲಿ ಬಿ. ಎಸ್. ಸಿ. ಓದಿದ್ದಾರೆ ಜೊತೆಗೆ ಪಂಚಾಯತಿಯ ಅಧ್ಯಕ್ಷರೂ ಆಗಿದ್ದಾರೆ. ಆ ಕಡೆಯ ಭಾಗದಲ್ಲಿ ಅನೇಕ ವರ್ಷಗಳಿಂದ ಪಂಚಾಯತಿ ಅಧ್ಯಕ್ಷರು ಆಗಿದ್ದು ಅನೇಕ ವಿಷಯಗಳನ್ನು ಅವರೇ ಇಲ್ಲ್ಯರ್ಥ ಮಾಡುತ್ತಿದ್ದರು ಎಂದು ನಾನು ಕೇಳಿದ್ದೇನೆ. ಇವರು ಒಂದು ವೇಳೆ ಆ ಕೃತ್ಯ ನಡೆದಾಗ ಆ ಸ್ಥಳದಲ್ಲಿ ಇದ್ದರೂ ಕೂಡ, ಏತಕ್ಕೆ ಆ ಸ್ಥಳದಲ್ಲಿ ಇದ್ದರು ಎನ್ನುವ ವಿಷಯ ಬಹಳ ಮುಖ್ಯವಾದುದು. ನಮಗೆ ಬಂದಿರುವ ವರದಿ ರೀತ್ಯಾ ಭಾಸ್ಕರ ಸಮಿತ ಅವರಿಗೂ, ಲಿಂಗಪೂಜಾರಿ ಅವರಿಗೂ ಮತ್ತು ರಾಘವ ಕೋಟ್ಯಾನ್ ಅವರಿಗೂ ಗೇಣಿ ಹಕ್ಕಿನ ಬಗ್ಗೆ ವಿವಾದ ಇತ್ತು. ಇದರ ಒಂದು ಇತ್ಯರ್ಥಕ್ಕಾಗಿ ಭಾಸ್ಕರ ಸಮಿತ ಅವರು ಅಲ್ಲಿಗೆ ಹೋಗಿದ್ದರು. ಪಂಚಾಯತಿಯ ಅಧ್ಯಕ್ಷರು ಈ ಒಂದು ವಿಷಯದ ಇತ್ಯರ್ಥಕ್ಕೆ ಹೋದಾಗ 4 ಜನ ಜೊತೆಯಲ್ಲಿ ಇದ್ದಿರಬಹುದು. It does not mean that all persons who go there have the intention to participate in the commission of offence. It becomes almost a different matter altogether. ಆದುದರಿಂದ ಅವರು ಈ ವಿಷಯದ ಇತ್ಯರ್ಥಕ್ಕಾಗಿ ಹೋಗಿದ್ದರು ಎಂದು ನಮಗೆ ಬಂದಿರುವ ವರದಿ ರೀತ್ಯಾ ಇದೆ. ಅವರು ಅಲ್ಲಿಗೆ

ಹೋದಾಗ ರಾಘವ ಕೋಟ್ಯಾನ್ ಕಡೆಯುವರಿಗೆ ಮತ್ತು ಲಿಂಗಪೂಜಾರಿ ಕಡೆಯುವರಿಗೆ ವಿವಾದ ನಡೆಯುತ್ತಿತು. ಆ ಅವಾದವನ್ನು ಪರಿಹರಿಸಲು ಇವರು ಹೋದರು ಅಲ್ಲಿಗೆ ಹೋದಾಗ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹೆಡ್ ಕಾನ್‌ಸ್ಟೇಬಲ್ ಗೋಪಾಲ ಶೆಟ್ಟಿ, ಮತ್ತು ಕಾನ್‌ಸ್ಟೇಬಲ್ ಒಬ್ಬನೇ ಕಾನ್‌ಸ್ಟಬಲ್ ಎಂದು ಹೇಳಿರುತ್ತಾರೆ. ಆದರೆ ಸಬ್ ಇನ್ಸ್‌ಪೆಕ್ಟರ್ ಕೊಟ್ಟಿರತಕ್ಕ ದೂರಿನ ಪ್ರಕಾರ ಇಬ್ಬರು ಎಂದು ಇವೆ. ಇದು ಎಷ್ಟೇ ಇರಲಿ, 2 ಜನ ಇರಲಿ, ಜನ ಇರಲಿ, ಸಂಪೂರ್ಣ ತನಿಖೆಯಾದ ಮೇಲೆ ಎಲ್ಲಾ ವಿಷಯ ಹೊರಗೆ ಬಂದೇ ಬರುತ್ತದೆ. ಸಬ್ ಇನ್ಸ್‌ಪೆಕ್ಟರ, ಬಂದಮೇಲೆ ಅಲ್ಲಿ ಬಹಳ ಗಲಾಟೆ ಆಗುತ್ತಿತ್ತು. ಸಬ್ ಇನ್ಸ್‌ಪೆಕ್ಟರ್ ಕೊಟ್ಟಿರತಕ್ಕ ದೂರಿನ ಪ್ರಕಾರ ಅವರು ಬಹಳ ಮಾತ ನಾಡುತ್ತಿದ್ದರು ಎಂದು ಇದೆ. ಭಾಸ್ಕರ ಸಮಿತ ಅವರ ಪರವಾಗಿ ವಿಶ್ವನಾಥ ಸಮಿತ ಅವರು ದೂರು ಕೊಟ್ಟಿದ್ದಾರೆ. ಈ ವಿಷಯ ಸರ್ಟಿಫೈಡ್ ಕಾಪಿಯಲ್ಲೂ ಇದೆ. ಸಬ್ ಇನ್ಸ್‌ಪೆಕ್ಟರ್ ಪೋಲೀಸ್ ಸೂಪರಿಂಟೆಂಡೆಂಟ್ ಅವರಿಗೆ, ಡಿ. ವೈ. ಎಸ್. ಪಿ. ಅವರಿಗೆ, ಚೀಫ್ ಮ್ಯಾಜಿಸ್ಟ್ರೇಟ್ ಆಫ್ ಮಂಗಳೂರು ಕೋರ್ಟ್ ಅವರಿಗೆ ಏನು ವರದಿ ಕೊಟ್ಟಿದ್ದಾರೆ ಅದರ ಒಂದು ಕಾಪಿಯನ್ನು ಕೊಡು ತ್ತೇನೆ. ಸಬ್ ಇನ್ಸ್‌ಪೆಕ್ಟರ್, ಹೋದಾಗ ಯಾವ ಒಂದು ಅಹಿತಕರವಾದ ಘಟನೆಗಳು ನಡೆಯುತ್ತಿರಲಿಲ್ಲ ಎಂದು ವರದಿಯಲ್ಲಿ ಇದೆ, ಅವರ ದೂರಿನಲ್ಲಿ ಹೆಣ್ಣು ಮಕ್ಕಳು ಮತ್ತು ಮಕ್ಕಳು ಸೇರಿ 20-30 ಜನ ಇದ್ದು ಅವರು ಗದ್ದೆಯಲ್ಲಿ ಕೊಯಿಲನ್ನು ಕಟಾವ್ ಮಾಡುತ್ತಿದ್ದರು ಆಗ ಆರೀತಿ ಕೊಯ್ಯಬಾರದು ಎಂದು ಹೇಳಲಾಯಿತು ಎಂಬುದಾಗಿ ಇದೆ. So until then, no unhappy incident took place according to the complaint of the sub-Inspector It is only after the Sub-Inspector and his party went to that places ಅಹಿತಕರವಾದ ಘಟನೆ ನಡೆಯದೆ ಇದ್ದರೂ ಕೂಡ ಅಲ್ಲಿ ಸಬ್ ಇನ್ಸ್‌ಪೆಕ್ಟರ್ ಇದ್ದರು. ಅಲ್ಲಿ ನಡೆಯುತ್ತಿದ್ದ ಗಲಾಟೆಯನ್ನು ಇಲ್ಲಿಸುವ ದೃಷ್ಟಿಯಿಂದ ನೀವು ಕೊಯ್ಯಬೇಡಿ ಎಂದು ಹೇಳಿದರು. He has no right to decide any matter relating to the Civil dispute between two individuals or any persons concerned there. It is the right given to the Civil Courts, Civil Court has to decide it. ಅವರು ಕೊಯ್ಯುವುದನ್ನು ಇಲ್ಲಿಸಬೇಕು ಎಂದು ಹೇಳಬೇಕಾಗುತ್ತದೆ. If there is a breach of peace ಶಾಂತಿಗೆ ಭಂಗ ಬರುತ್ತದೆ ಎಂದು 144 ಸಿ. ಆರ್. ಪಿ. ಸಿ. ಪ್ರಕಾರ ಇನ್‌ವೋಕ್ ಮಾಡುವುದಕ್ಕೆ ಬರುತ್ತಿತ್ತು. In respect of immoveable property ಕೋರ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾದ ಕ್ರಮಕ್ಕೆ ಸಂಬಂಧಪಟ್ಟ ಏನು ಸೆಕ್ಷನ್ಸ್ ಇವೆ, ಅದರ ಪ್ರಕಾರ ಕಾರ್ಯ ಕ್ರಮ ತೆಗೆದುಕೊಂಡು ಸಬ್ ಇನ್ಸ್‌ಪೆಕ್ಟರ್ ವರದಿ ಮಾಡಿಲ್ಲ. What he has done is he has stopped all those persons who were harvesting the crops ಅವರಿಗೆ ಕೊಯ್ಯಬೇಡಿ ಎಂದು ಹೇಳಿದರು. Immediately according to his complaint, these persons along with Bhaskar Semitha started pelting stones at the persons who were there. ಸಬ್ ಇನ್ಸ್‌ಪೆಕ್ಟರ, ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ ರು. ಹೆಡ್ ಕಾನ್‌ಸ್ಟೆಬಲ್ ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದನೆಂದು ವರದಿಯಲ್ಲಿ ಇದೆ. If the Sub-Inspector and his party have really discharg'd their duties they could have stopped this incident. ಆದರೆ ಅವರು ಅಹಿತಕರವಾದ ಘಟನೆ ಯನ್ನು ನಿಲ್ಲಿಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಿಲ್ಲ. ಹಾಗೇನಾದರೂ ಅವರು ಪ್ರಯತ್ನ ಮಾಡಿದ್ದರೆ ಭಾಸ್ಕರ ಸಮಿತ ಅಕೃತ್ಯಕ್ಕೆ ತುತ್ತಾಗುತ್ತಿರಲಿಲ್ಲ, ಆತ ಜೀವವನ್ನು ಕಳೆದುಕೊಳ್ಳ ತಕ್ಕ ಪ್ರಸಂಗ ಬರುತ್ತಾ ಇರಲಿಲ್ಲ. ರಾಘವ ಕೋಟ್ಯಾನಗೆ ಪೆಟ್ಟು ಬಿದ್ದಿದೆ ಎಂದು ಇದೆ. If he had received some injuries on the forehead or left side of his shoulder, the law will take its own course. ಕಾನೂನು ಪ್ರಕಾರ ಏನು ಮಾಡಬೇಕೊ ಆ ರೀತಿ ಮಾಡುವುದಕ್ಕೆ ಬರುತ್ತಿತ್ತು. ಹಾಗೆ ಮಾಡುವುದನ್ನು ಬಿಟ್ಟು ಅಲ್ಲಿ ಏನು ಆಯಿತು ? ಸ್ಟ್ಯಾಬಿಂಗ್ ಆಗಿ ಹೋಯಿತು ಇದರಲ್ಲಿ ಇನ್ನೊಂದು ಪ್ರಮುಖ ವಿಷಯ ಇದೆ. ಅವರ ದೂರಿನ ಪ್ರಕಾರ ಕುಡುಗೋಲು ಆಯುಧವನ್ನು ಉಪಯೋಗಿಸಿ ತಲೆಗೆ ಪೆಟ್ಟು ಬಿದ್ದಿದೆ ಎಂದೂ, ಎಡೆಗೈಗೆ ಗಾಯವಾಗಿದೆಯೆಂದೂ ಇದೆ. ಈ ಸಬ್ ಇನ್ಸ್‌ಪೆಕ್ಟರ್ ಈ ಕೃತ್ಯವನ್ನು ನೋಡಿದರೂ ಸಹ he did not try to disperse the crowd. On the other hand they have seen this incident, and people afterwards dispersed themselves. This man nor his subordinate police officials did not try to disperse the crowd at all. ಆಮೇಲೆ ಗುಂಪು ಚದುರಿತು. This is the only incident which took place between 12-00 and 1-00 P.M. according to his complaint. There

is no other case registered by the Police in which Sri Bhaskara Semitha was stabbed. This Sub-Inspector and the Police people were there. To the complaints made he has not referred to the stabbing incident of Bhaskara Semitha ; why ? ಕೊನೆಯ ಪಕ್ಷ ಇವರಿಗೆ ಕಾನೂನಿನ ಪರಿವೆ, ಪ್ರಜ್ಞೆ ಬೇಡವೇ ? ಈ ರೀತಿ ಸ್ಟ್ಯಾಬ್ಬಿಂಗ್ ಆಯಿತು, ಯಾವರೀತಿ ಎನ್ನುವುದನ್ನು ಬರೆಯುವುದು ಬೇಡವೇ ? Let him not write that Raghava Kotian did stab this Bhaskara Semitha. At least, if the sub-inspector and the Police people had taken proper care to admit the person who had received severe bleading injury to his stomach portion ಅದನ್ನು ಬರೆಯತಕ್ಕ ಕರ್ತವ್ಯ ಕೂಡ ಅವರಿಗೆ ಇರಲಿಲ್ಲವೇ ? to what extent the Sub-Inspector has gone ಎನ್ನುವುದನ್ನು ಮಾನ್ಯ ಅಧ್ಯಕ್ಷರು, ಮಾನ್ಯ ಸರ್ಕಾರದವರು, ಮಾನ್ಯ ಸಚಿವರು ತಿಳಿದುಕೊಳ್ಳಬೇಕು. ಅವರ ದೂರಿನ ಪ್ರಕಾರ ಒಬ್ಬ ವ್ಯಕ್ತಿ ಸಾಯಬಹುದು, ಸ್ಟ್ಯಾಬಿಂಗ್ ಆಗಬಹುದು, ಜನ ಸತ್ತು ಬಿಡಬಹುದು ಅದು ಏನಾದರೂ ಆಗಲಿ ಅವನ ತಲೆಗೆ ಪೆಟ್ಟು ಬಿದ್ದಿರುವುದೇ ಅವನಿಗೆ ಬಹಳ ಮುಖ್ಯ. Immediately he rushed himself to the Wenlock Hospital for treatment ಆತನಿಗೆ ಸತ್ತವನ ಬಗ್ಗೆ ಗಮನ ಇಲ್ಲ. ತಾನೇ ಮೊದಲು ಹೋಗಬಿಟ್ಟು ಅಡ್ಮಿಟ್ ಆಗುವ ಪರಿಸ್ಥಿತಿಯನ್ನು ತಂದು ಕೊಂಡಿದ್ದಾನೆ. ಅವರ ಕಂಪ್ಲೆಂಟ್ ಹಿಡಿದುಕೊಂಡೇ ನಾನು ಹೇಳುತ್ತಿರುವುದು. ನಾನು ಯಾವುದನ್ನು ಹೊಸದಾಗಿ ವ್ಯಾಖ್ಯಾನ ಮಾಡಲಿಲ್ಲ. ವರ್ಬ್ಯಾಟಿಮ್ ಇದೆ ಅದನ್ನು ಓದಿದ್ದೇನೆ. I don't think the Sub-Inspector can escape from what he has averred in his own complaint.

I have got photostat copies of them. ಇದರಲ್ಲಿ ಸಬ್‌ಇನ್ಸ್‌ಪೆಕ್ಟರ ಪಾತ್ರ ಸಂಪೂರ್ಣವಾಗಿದ್ದಂತೆ ನನಗೆ ಕಂಡುಬರುತ್ತದೆ. ಸದಾಶಿವಶೆಟ್ಟಿ, ಸುಬ್ಬಯ್ಯಶೆಟ್ಟಿ ಇತ್ಯಾದಿ ಅನೇಕರ ಮೆಡಿಕಲ್ ಸರ್ಟಿಫಿಕೇಟುಗಳನ್ನು ನಾನು ನನ್ನಲ್ಲಿ ಇಟ್ಟುಕೊಂಡಿದ್ದೇನೆ.

ಅಧ್ಯಕ್ಷರು.—ತಾವು ಮತ್ತೆ ಹೇಳಿದ್ದನ್ನೇ ಹೇಳುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ನನ್ನಲ್ಲಿ ಅನೇಕ ಜನರ ಮೆಡಿಕಲ್ ಸರ್ಟಿಫಿಕೇಟುಗಳಿವೆ. I am now referring to the other persons who received so many injuries. Medical certificates are there. I have got certified copies again to prove all those things.

ಮಾನ್ಯ ಅಧ್ಯಕ್ಷರೇ, ಈ ಕಾಷೀನ್ ಪ್ರಕಾರ ಪೋಲೀಸಿನವರು ಅಲ್ಲಿದ್ದ ಜನರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಹಾಗೆ ಅವರನ್ನು ಹೊಡೆದು ಆ ದಿವಸ ಸುಮಾರು ಆರೂವರೆಗಂಟೆ ಸಮಯದಲ್ಲಿ ಆ ಜನರನ್ನು ತೆಗೆದುಕೊಂಡು ಹೋಗಿ ಮ್ಯಾಜಿಸ್ಟ್ರೇಟರ ಮನೆಯ ಮುಂದೆ ಹಾಜರ್ಮಾಡಿದ್ದಾರೆ. ಆಗ ಮ್ಯಾಜಿಸ್ಟ್ರೇಟರು ನಿಮಗೆ ಪೋಲೀಸರು ಹೊಡದರೇ ಎಂದು ಕೇಳಿದ್ದಾರೆ. They have been produced before the Magistrate. The Magistrate asked a person who was arrested by the police whether he received any injuries and whether he was troubled by the police. Every person who was produced before the Magistrate in his residence has said that he was beaten by the police.

10-30 A.M.

ಈ ಮಾತುಗಳೆಲ್ಲಾ ಮುಗಿದ ನಂತರ ಮ್ಯಾಜಿಸ್ಟ್ರೇಟರು ಅವರನ್ನು ಮಾರನೆ ದಿನ 12 ಗಂಟೆಗೆ ಕೋರ್ಟಿಗೆ ಹಾಜರ್ಮಾಡುವಂತೆ ಹೇಳಿದ್ದಾರೆ. In the meanwhile he said these persons should be immediately taken to the hospital for treatment. ಅನೇಕರಿಗೆ ಏಟುಗಳು ಬಿದ್ದಿದ್ದವು. Those police officials have been transferred. To facilitate impartial investigation of the two cases the Sub-Inspector of Bajpe Police Station, 3 Head Constables and one Police Constable have been transferred out of the station and they are also relieved. Bhaskar Samithe was taken from the Government Hospital to the Manipal

Hospital and on the 17th he died. A case was registered under Section 302 against this very Head Constable (I speake subject to correction) and Raghav Kotiyan. ಗದ್ದೆ ಕೊಯ್ಯುತ್ತಿದ್ದ ಹೆಣ್ಣುಮಕ್ಕಳನ್ನು, ಅಂಗಡಿ ಕಟ್ಟೆಯಮೇಲೆ ಕುಳಿತಿದ್ದ ಜನರನ್ನು, ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಜನರನ್ನು ಬಸ್ಸಿದಿಂದ ಕೆಳಗಿಳಿಸಿ ಪೋಲೀಸಿನವರು ಚೆನ್ನಾಗಿ ಹೊಡೆದಿದ್ದಾರೆ. ಅಲ್ಲಿ ಆ ಹೆಣ್ಣುಮಕ್ಕಳ ಮಾನ ಭಂಗ ವಾಗತಕ್ಕ ರೀತಿಯಲ್ಲಿ ಪೋಲೀಸರು ಕೃತ್ಯಗಳನ್ನು ನಡೆಸಿದ್ದಾರೆ. ಇದಕ್ಕೆಲ್ಲಾ ಸರ್ಕಾರದವರು ಈಗ ಉತ್ತರಕೊಡಬೇಕಾಗಿದೆ. ಇಷ್ಟೆಲ್ಲಾ ನಡೆದಿದ್ದರೂ ಸೆಕ್ಷನ್ 302ರ ಪ್ರಕಾರ ಕೇಸ್ ರಿಜಿಷ್ಟ ರಾಗಿದ್ದರೆ ಆ ಪೋಲೀಸಿನವರನ್ನು ಏಕೆ ಅರೆಸ್ಟ್ ಮಾಡಲಿಲ್ಲ ? ಅವರನ್ನು ಅರೆಸ್ಟ ಮಾಡದೆ ಕೇಸನ್ನು ಹೇಗೆ ಇನ್‌ವೆಸ್ಟಿಗೇಟ್ ಮಾಡುತ್ತಾರೆ ?

> "Whether they continue to work at Bajpe Police Station or Udippi or elsewhere, it will come in the way of fair investigation. There are innumerable decisions in this behalf. I want to know what action has the Government taken against these police officers. Is more transfer from Bajpe Police Station amounts to taking action against them ? Instead of keeping them under suspension immediately to facilitate a fair investigation, they must immediatcly be kept behind the bars.''

ಬೇರೆ ಒಬ್ಬ ಸಾಮಾನ್ಯ ವ್ಯಕ್ತಿ ಹೀಗೆ ಮರ್ಡರ್ ಕೇಸಿನಲ್ಲಿ ಸಿಕ್ಕಿಕೊಂಡಿದ್ದರೆ ಆತನನ್ನು ಅರೆಸ್ಟ ಮಾಡಿ ಪೋಲೀಸಿನವರು ಇನ್‌ವೆಸ್ಟಿಗೇಟ್ ಮಾಡುತ್ತಿದ್ದರೆ ! ಪೋಲೀಸಿನವರು ಇತ್ತೀಚೆಗೆ ಸಾಮಾನ್ಯವಾಗಿ ಜನರ ಕೈಕಾಲುಗಳನ್ನು ಮುರಿಯುವುದು ಅವರನ್ನು ಸಾಯಿಸುವುದು ಹೆಚ್ಚಾಗಿದೆ. ಇದರಬಗ್ಗೆ ಆ ಹಾಸನ, ರಾಣಿಬೆನ್ನೂರು, ಆ ತಿಮ್ಮಪ್ಪನ ನಿದರ್ಶನ ಹೀಗೆ ಬೇಕಾದಷ್ಟು ಇವೆ. ಅದಕ್ಕಾಗಿ ಈ ಸಂದರ್ಭದಲ್ಲ ಸರ್ಕಾರದವರು ಒಂದು ನ್ಯಾಯಾಂಗ ವಿಚಾರಣೆಯನ್ನು ಮಾಡಿಸಲೇಬೇಕೆಂದು ಒತ್ತಾಯ ಮಾಡುತ್ತೇನೆ. ಆದರೆ ಇದು ಆ ಹಾಸನದಲ್ಲಿ ನಡೆದ ಟೈಪಿನದಲ್ಲ. Therefore I request the Government to appoint a judicial commission to probe into this matter and give justice to the people or else the lives and properties of the common men in the country will certainly be in danger and peril. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷರೇ, ಈ ನಿಲುವಳಿಯ ಸೂಚನೆಯ ಮೇಲೆ ಶ್ರೀಮಾನ್ ಬಂಗಾರಪ್ಪನವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಅಲ್ಲದೆ ಅನೇಕ ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಅವರು ಹೇಳಿದ್ದನ್ನೆಲ್ಲಾ ಕೇಳಿದ ಮೇಲೆ ನಾನು ಹೆಚ್ಚು ಹೇಳಬೇಕಾದ್ದಿಲ್ಲ. ಇದರ ಬಗ್ಗೆ ಈಗಾಗಲೇ ಒಂದು ಸ್ಪಷ್ಟೀಕರಣವನ್ನು ಮೊನ್ನೆಯಲ್ಲಿ ಸರ್ಕಾರದವರು ಮಾಡಿದ್ದಾಗಿದೆ. ಯಾರೂ ಇದಕ್ಕೆ ಒಂದು ರಾಜಕೀಯ ಬಣ್ಣ ವನ್ನು ಹಾಕುವುದಕ್ಕೆ ಹೋಗುವುದು ಬೇಡ. ಅಲ್ಲಿ ಈ ಕೃತ್ಯದಲ್ಲಿ ಸಿಕ್ಕಿಕೊಂಡಿರತಕ್ಕ ಜನರು ಯಾವ ರಾಜಕೀಯ ಪಕ್ಷಕ್ಕೇ ಸೇರಿರಲಿ ಅವರು ಆಡಳಿತ ಕಾಂಗ್ರೆಸ್ ಪಕ್ಷಕ್ಕೇ ಸೇರಿರಲಿ, ಕಾಂಗ್ರೆಸ್ ಓ ಪಕ್ಷಕ್ಕೇ ಸೇರಿರಲಿ, ಇಲ್ಲವೇ ಸಿ.ಪಿ.ಐ. ಪಕ್ಷಕ್ಕೆ ಇಲ್ಲವೇ ಸಿ.ಪಿ.ಎಂ. ಪಕ್ಷ ಹೀಗೆ ಯಾವುದಕ್ಕೇ ಸೇರಿರಲಿ ಅದು ನಮಗೆ ಮುಖ್ಯವಾದ್ದಲ್ಲ. ಇದರಲ್ಲಿ ಒಂದು ಮೂಲತಃ ಪ್ರಶ್ನೆ ಏನಿದೆ ಎಂದರೆ ರಾಜ್ಯದಲ್ಲಿ ಯಾವ ಒಬ್ಬ ವ್ಯಕ್ತಿಯೇ ಆಗಲಿ ನಿರ್ಭಯದಿಂದ ಜೀವನ ಮಾಡುವುದಕ್ಕೆ ಸಾಧ್ಯವಿದೆಯೇ ಇಲ್ಲವೇ ಎಂಬುದೇ ನಮ್ಮ ಮುಂದಿರತಕ್ಕ ಮುಖ್ಯ ಪ್ರಶ್ನೆ. ಅಂದರೆ ರಾಜ್ಯದಲ್ಲಿರತಕ್ಕ ಒಂದು ಕಾನೂನು ಚೌಕಟ್ಟಿನಲ್ಲಿ ಎಲ್ಲರೂ ನಡೆಯಬೇಕು ಅದಕ್ಕೆ ಮೀರಿ ನಡೆದರೆ ಅಂಥವರ ಬಗ್ಗೆ ಕ್ರಮ ವನ್ನು ಕೈಗೊಳ್ಳಲೇಬೇಕು. ಇದಕ್ಕೆ ಯಾವ ರಾಜಕೀಯ ಪಕ್ಷವೂ ಅಡ್ಡಿಬರಬಾರದು ನನಗೆ ಜ್ಞಾಪಕವಿದ್ದ ಹಾಗೆ ಇಂಥ ತೀವ್ರಪ್ರಕಾರ ವಿಷಯದಲ್ಲಿ ಈ ಮನೆಯಲ್ಲಿ ನಿಲುವಳಿ ಸೂಚನೆಗೆ ಅವಕಾಶ ದೊರೆತಿರುವುದು ಇದೇ ಪ್ರಪ್ರಥಮವೆಂದು ನನಗೆ ಕಾಣುತ್ತಿದೆ. ಹಿಂದೆ ಆ ಮುನಿಯಮ್ಮ ಪ್ರಕರಣವೊಂದನ್ನು ಬಿಟ್ಟರೆ ಇದೇ ಮೊದಲನೆಯದು. ಈ ರಾಜಕೀಯದಲ್ಲಿ ಯಾರೂ ಶಾಶ್ವತ ವಾಗಿ ಇರುತ್ತೇವೆಂದು ಭಾವಿಸಬಾರದು. ರಾಜಕೀಯದಲ್ಲಿ ಪಕ್ಷ ಭಿನ್ನಾಭಿಪ್ರಾಯವಿರಬಹುದು ; ಆದರೆ ಈ ವಿಷಯವನ್ನು ನೋಡುವಾಗ ನಿಮ್ಮ ಮನಸ್ಸಿಗೆ ಏನು ಪರಿಣಾಮವಾಗುತ್ತದೆ ಎಂಬು

ದನ್ನು ನಿಮಗೇ ಬಿಡುತ್ತೇನೆ. ಇವೊತ್ತು ಭಾಸ್ಕರ ಸೇಮಿತ, ಲಿಂಗು ಪೂಜಾರಿ ಮತ್ತು ರಾಘವ ಕೋಟಿಯಾನ್ ಈ ವ್ಯಕ್ತಿಗಳ ವೈಯಕ್ತಿಕವಾದಂಥ ಒಂದು ರಾಜಕೀಯ ಸಂಬಂಧವನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಲಿಂಗುಪೂಜಾರಿ ಆ ಜಮೀನನ್ನು ಎಷ್ಟು ದಿವಸಗಳಿಂದ ಮಾಡುತ್ತಿದ್ದಾನೆ, ಲವಿ ಕೊಟ್ಟಿದ್ದಾನೆಯೇ ಅಥವಾ ಇಲ್ಲವೇ ಎಂಬಂತಕ್ಕಂಥ ಎಲ್ಲ ವಿವರಗಳನ್ನು ಈ ಸಭೆಯಲ್ಲಿ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ನನ್ನ ಮಿತ್ರರು ಹೇಳಿದಂತೆ ಈ ಅಂಶಗಳನ್ನು ತೀರ್ಮಾನ ಮಾಡಲು ನ್ಯಾಯಾಲಯಗಳಿವೆ. ಅಲ್ಲಿ ತೀರ್ಮಾನವಾಗುತ್ತದೆ. ಆದಕಾರಣ ನಾನು ಆತನ ರೈಟ್ಸ್ ಬಗ್ಗೆ ನಾನು ವಿವರಣೆ ಕೊಡುವುದಕ್ಕೆ ಇಚ್ಛೆಪಡುವುದಿಲ್ಲ. ಲಿಂಗುಪೂಜಾರಿ ಮೊದಲನೆಯ ಬೆಳೆಯನ್ನು ಇಟ್ಟಿದ್ದ. ಮಂಗಳೂರು ಕಡೆ ಮೊದಲನೆಯ ಬೆಳೆಗೆ ಒನಾಲೆ ಕ್ರಾಪ್ ಎಂದು ಹೇಳುತ್ತಾರೆ. ಆ ಬೆಳೆ ಕಟಾವಿಗೆ ಬಂದಾಗ ರಾಘುವಕೋಟಿಯಾನ್ ಅಲ್ಲಿಗೆ ಹೋಗಿ ಆ ಬೆಳೆಯನ್ನು ಲೂಟಿ ಮಾಡಿಕೊಂಡು ಹೋಗುತ್ತಾನೆ. ಆಗ ಲಿಂಗುಪೂಜಾರಿ ಪೋಲೀಸರಿಗೆ ಕಂಪ್ಲೈಂಟ್ ಕೊಡುತ್ತಾನೆ. ಅದರ ಒಂದು ಇನ್‌ವೆಸ್ಟಿಗೇಷನ್‌ಗೆ ಡಿ.ವೈ.ಎಸ್.ಪಿ.ಗೆ ರೆಫರ್ ಆಗುತ್ತದೆ. ಅವರು ವಿಚಾರಣೆ ಮಾಡಿದಮೇಲೆ ಸಬ್‌ಇನ್ಸ್‌ಪೆಕ್ಟರ್‌ಗೆ ಒಂದು ಪತ್ರ ಬರೆಯುತ್ತಾರೆ. ಆ ಪತ್ರದ ಕಡೆಗೆ ತಮ್ಮ ಒಂದು ಗಮನ ಸೆಳೆಯುವುದಕ್ಕೆ ಬಯಸುತ್ತೇನೆ

> "During investigation into the private complaint entrusted to me for investigation by the court into the complaint of one Linga Poojari of Bedthur Village, Bajpe, Cr. No. 155/74, the accused Ragava Kotian could not produce any records to prove his tenancy and he illegally cut away the crop from Revenue S.No. 63/3 and 67/A of Bedthur village on 4-7-1974. You should not allow the accused to carry out the forcible cultivation any further and action should be taken as per law if he continues ploughing and sowing operation under intimation to this office."

ಇದನ್ನು ಇಲ್ಲಿಗೆ ಬಿಡುತ್ತೇನೆ. ಇದರ ನಂತರ ಲಿಂಗುಪೂಜಾರಿ ಎರಡನೇ ಬೆಳೆಯನ್ನು ಇಡುತ್ತಾನೆ ಬೆಳೆ ಕಟಾವಿಗೆ ಬಂದಾಗ ಮತ್ತೆ ವಿವಾದ ಪ್ರಾರಂಭವಾಗುತ್ತದೆ. ಮಂಗಳೂರು ಕಡೆ ಹೆಣ್ಣು ಮಕ್ಕಳೇ ಹಾರ್‌ವೆಸ್ಟಿಗೆ ಹೋಗುತ್ತಾರೆ. ಅದರಂತೆ 20-30 ಜನ ಹೆಣ್ಣುಮಕ್ಕಳು 8ನೇ ತಾರೀಖು ಆ ಕೆಲಸವನ್ನು ಮಾಡುತ್ತಿದ್ದರು. ಆಗ ಆ ಸ್ಥಳಕ್ಕೆ ಇದೇ ರಾಘವಕೋಟಿಯಾನ್ ಮತ್ತು ಆತನ ಕೆಲವು ಹಿಂಬದಿಯ ವ್ಯಕ್ತಿಗಳು, ಸಬ್‌ಇನ್ಸ್‌ಪೆಕ್ಟರ್, ಹೆಡ್‌ಕಾನ್ಸ್‌ಟೇಬಲ್ ಆದ ಶ್ರೀಮಾನ್ ಗೋಪಾಲಶೆಟ್ಟಿ ಎಂಬುವರೆಲ್ಲಾ ಹೋದಾಗ ಈ ಒಂದು ಘಟನೆ ನಡೆಯುತ್ತದೆ. ನಾನು ಈಗ ಮೆರಿಟ್ಸ್ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅಂದೇ ಆಸ್ಥಳಕ್ಕೆ ಶ್ರೀ ಭಾಸ್ಕರಸೇಮಿತ ಅವರು ಮಂಗಳೂರಿನಿಂದ ಬಸ್‌ನಲ್ಲಿ ಬರುತ್ತಾರೆ. ಅಲ್ಲಿಗೆ ಬಂದಾಗ ರಾಘವ ಕೋಟಿಯಾನ್ ಎಂಬುವರು ತಮ್ಮ ಸೊಂಟದಲ್ಲಿದ್ದ ಚಾಕುವನ್ನು ತೆಗೆದು ಭಾಸ್ಕರ ಸೇಮಿತ ಅವರಿಗೆ ಹೊಡೆಯುತ್ತಾರೆ. ಅವರು ಪಂಚಾಯಿತಿಯ ಚೇರ್‌ಮನ್ ಆಗಿದ್ದವರು ; ಅವರಿಗೆ ಇನ್ನೂ 35 ವರ್ಷ ವಯಸ್ಸಾಗಿತ್ತು ; ಅಲ್ಲದೆ ಅವರಿಗೆ ಇನ್ನೂ ಹಸು ಮಕ್ಕಳಿವೆ. ಅವರು ಬಿ.ಎಸ್.ಸಿ. ಗ್ರಾಜುಯೇಟ್ ಸಹ ಆಗಿದ್ದರು. ಅಂತಹವರಿಗೆ ಹೊಡೆದಿದ್ದಾರೆ. ಆದು ಆದಮೇಲೆ ಅವರನ್ನು ಮಂಗಳೂರು ಆಸ್ಪತ್ರೆಗೆ ತಗೆದುಕೊಂಡು ಹೋಗಿ ಅಡ್ಮಿಟ್ ಮಾಡಿದ್ದಾರೆ. ನಿಮ್ಮ ಪೋಲೀಸ್ ಅಧಿಕಾರಿಗಳು ಸಹ ಅಲ್ಲಿಗೆ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಂಡಿದ್ದಾರೆ. ಇದು ನಡೆದಮೇಲೆ ರಾಘವಕೋಟಿಯಾನ್ ಅವರು ಕೊಟ್ಟ ಕಂಪ್ಲೈಂಟ್ ಮೇಲೆ ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಅವರು ಒಂದು ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ. ಏನೆಂದರೆ ಭಾಸ್ಕರಸೇಮಿತ ಎಂಬುವರು ಅಬ್ಸ್‌ಕಾಂಡಿಂಗ್ ಆಗಿದ್ದಾರೆ ಎಂದು. ಮಾನ್ಯ ಹುಚ್ಚಮಾಸ್ತಿಗೌಡರು ದಯಮಾಡಿ 8ನೇ ತಾರೀಖು ಯಾವ ಕೇಸನ್ನು ರಿಜಿಸ್ಟರ್ಡ್ ಮಾಡಿದ್ದಾರೆಂದು ಹೇಳುತ್ತಾರೋ ಅದರ ಡೈರಿಯನ್ನು ಈ ಸಭೆಗೆ ತರಿಸಬೇಕೆಂದು ಹೇಳುತ್ತೇನೆ. ಏಕೆಂದರೆ He was actually admitted into the hospital. He is dying ಆ ರೀತಿ ಇರುವಾಗ ಭಾಸ್ಕರಸೇಮಿತ ಎಂಬುವರು ಅಬ್ಸ್‌ಕಾಂಡಿಂಗ್ ಎಂದು ರಿಪೋರ್ಟ್ ಮಾಡಿದ್ದು ಸರಿಯೇ ? ಆಸ್ಪತ್ರೆಯಲ್ಲಿ ಅವರಿಗೆ ಟ್ರೀಟ್‌ಮೆಂಟ್ ಮಾಡುತ್ತಾರೆ. ಆದರೆ ಅಲ್ಲಿ ಸಾಧ್ಯವಾಗದ ಕಾರಣ ಮಣಿಪಾಲ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಸೇರಿಸುತ್ತಾರೆ. ಅಲ್ಲಿ ಅವರು 17ನೇ ತಾರೀಖು ಸತ್ತುಹೋಗುತ್ತಾರೆ. ಇಲ್ಲಿ ಸಬ್‌ಇನ್ಸ್‌ಪೆಕ್ಟರ್ ಅವರ ತಪ್ಪು ಏನೇ ಇರಲಿ, ಈ ವಿಚಾರದಲ್ಲಿ ಆ ಜಿಲ್ಲೆಯ ಡಿ.ವೈ.ಎಸ್.ಪಿ.ಗೆ ಟೆಲಿಗ್ರಾಂ ಕಳಿಸಿದ್ದಾರೆ.

ಐ.ಜಿ.ಪಿ.ಗೆ ಟೆಲಿಗ್ರಾಂ ಕಳುಹಿಸಿದ್ದಾರೆ, ಕಳುಹಿಸಿದ್ದಾರೆ. ಸಂಬಂಧಪಟ್ಟ ಎಲ್ಲ ಹಿರಿಯ ಅಧಿಕಾರಿಗಳಿಗೂ ಟೆಲಿಗ್ರಾಂ ಕಳುಹಿಸಿದ್ದಾರೆ, ಡಿ.ವೈ.ಎಸ್.ಪಿ. ಅವರು ಎನ್‌ಕ್ವೈರಿಗಾಗಿ ಹೋಗಿದ್ದಾರೆಂದು ತಾವು ಹೇಳುತ್ತೀರಿ; ಆದರೆ ನಿಮಗೆ ನಿಜವಾಗಿಯೂ ದೇವರ ಹೆಸರಿನಲ್ಲಿ ನ್ಯಾಯ ದೊರಕಿಸಿಕೊಡಬೇಕು ಎಂಬ ಇಚ್ಛೆಯಿದ್ದರೆ ಅಲ್ಲಿನ ಡಿ.ವೈ.ಎಸ್.ಪಿ ಯನ್ನು ಸಸ್ಪೆಂಡ್ ಮಾಡಬೇಕು. A person who was in-chargeof District Administration must be kept under suspension. A man at the spot who knows must be kept under suspension. If you want to show to the State that you are doing justice you must keep him under suspension. ಇದು ಆದ ಮೇಲೆ ಆ ರಾತ್ರಿ ಪೋಲೀಸ್ ಅಧಿಕಾರಿಗಳು ಹೋಗಿ ಭಾಸ್ಕರ ಸೋಮಿತ ಅವರ ಕಡೆ ಇದ್ದಂಥ ಹೆಣ್ಣುಮಕ್ಕಳನ್ನು ಮತ್ತು ಅವರ ಕಡೆಯ ಅನೇಕ ಜನ ಹಿಂಬದಿ ಜನರನ್ನು ಹಿಡಿದು they have brought to the police station, ಬೆಳಿಗ್ಗೆ ಅವರನ್ನೆಲ್ಲಾ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದಾಗ, ಆ ಮ್ಯಾಜಿಸ್ಟ್ರೇಟರು ಆ ಜನರ ಮೈಮೇಲಿದ್ದಂಥ ಗಾಯಗಳನ್ನು ನೋಡಿ ಅವರನ್ನೆಲ್ಲಾ ಆಸ್ಪತ್ರೆಗೆ ಡೈರೆಕ್ಟ್ ಮಾಡುತ್ತಾರೆ. ಅದರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನಾನು ಈ ಬಗ್ಗೆ ತಮ್ಮಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ಏನೆಂದರೆ ಇದರಲ್ಲಿ ಪ್ರತಿಷ್ಠೆಯ ಮಾತು ಬೇಡ. ನಾನು ಈ ಬಗ್ಗೆ ಯಾವುದೇ ರಾಜಕೀಯ ಬಣ್ಣ ಹಚ್ಚಿ ಹೇಳುತ್ತಿಲ್ಲ ; ಆ ಕಾರಣ ಇದರಲ್ಲಿ ಸೇರಿರುವರು ಯಾವುದೇ ಪಕ್ಷಗಳಿಗೆ ಸೇರಿರಲಿ, ನಿಮ್ಮ ಒಂದು ಆಡಳಿತದಲ್ಲಿ ಈ ರಾಜ್ಯದಲ್ಲಿ ನಿಮ್ಮ ರಾಜಕೀಯ ವಿರೋಧಿಗಳಿಗೂ ಸಹ ನ್ಯಾಯವನ್ನು ದೊರಕಿಸಿಕೊಳ್ಳತಕ್ಕ ರೀತಿಯಲ್ಲಿ ಆಡಳಿತ ನಡೆಸಿ, ಎಲ್ಲರಿಗೂ ನ್ಯಾಯವನ್ನು ದೊರಕಿಸಿಕೊಡಿ ಎಂದು ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ನೀವು ಆಡಳಿತದಲ್ಲಿರುವರೆಗೆ ಜನತೆಗೆ ನ್ಯಾಯವನ್ನು ದೊರಕಿಸಿಕೊಡಿ. ನನ್ನ ಮಿತ್ರರು ಮಾತನಾಡುವಾಗ ಮೆಡಿಕಲ್ ಸರ್ಟಿಫಿಕೇಟ್ ಬಗ್ಗೆ ಮಾತನಾಡಿದ್ದಾರೆ. ಈ ಪ್ರಕರಣದಲ್ಲಿ ಮರಣ ಹೊಂದಿದ ಭಾಸ್ಕರಸೋಮಿತ ಅವರು ಸಾಯುವುದಕ್ಕೆ ಮೊದಲು ಅರ್ಧಂಬರ್ಧ ಪ್ರಜ್ಞೆಯಲ್ಲಿದ್ದಾಗ ಅವರಿಂದ ಡೈಯಿಂಗ್ ಸ್ಟೇಟ್‌ಮೆಂಟ್ ಒಂದನ್ನು ರೆಕಾರ್ಡ್ ಮಾಡಿಕೊಳ್ಳಲಾಗಿದೆ. ಅದರ ಬಗ್ಗೆಯೂ ಸಹ ಇಲ್ಲಿಯವರೆಗೆ ಪೋಲೀಸ್ ಅಧಿಕಾರಿಗಳು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಮಾನ್ಯ ಹುಚ್ಚಮಾಸ್ತಿಗೌಡರು ಹಿರಿಯ ಅಧಿಕಾರಿಗಳಿಂದ ಬಂದಂಥ ವರದಿಯನ್ನು ಇಲ್ಲಿ ಓದಿದರು. ಆದರೆ ಅಲ್ಲಿ ನಡೆದಿರುವುದೇ ಬೇರೆ. ರಾಘವಕೋಟಿಯಾನ್ ಎಂಬ ವ್ಯಕ್ತಿಯೇ ಪೋಲೀಸ್ ಅಧಿಕಾರಿಗಳನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದಾನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ಬಗ್ಗೆ ಒಂದು ವಿಷಯ ಹೇಳುತ್ತೇನೆ ; ಏನೆಂದರೆ ಅಂದು 9 ಗಂಟೆಯ ಸಮಯದಲ್ಲಿ ನಾನು ಮೊದಲೇ ಹೇಳಿದಂತೆ ಹಸನಬಾಬು ಎಂಬ ವ್ಯಕ್ತಿ ಹೋಗಿ ಹೇಳಿದಮೇಲೆ ಸಬ್-ಇನ್ಸ್‌ಪೆಕ್ಟರ್ ಅವರು ಆ ಸ್ಥಳಕ್ಕೆ ಹೋಗಿ ವಾರನ್ ಮಾಡಿ ವಾಪಸ್ ಹೊರಟು ಹೋಗುತ್ತಾರೆ. ತಿರುಗಿ 12 ಗಂಟೆಗೆ ಆ ಸ್ಥಳಕ್ಕೆ ರಾಘವ ಕೋಟಿಯಾನ್ ಹೋಗುತ್ತಾರೆ. ಎಲ್ಲ ವಿವರಗಳನ್ನು ನಾನು ಈ ಮೊದಲು ಕೊಡಲಿಲ್ಲ ; ಮುಂದೆ ಏನು ಮಾಡಬೇಕು ಎಂಬುದು ಬೇರೆ ; ಅದನ್ನು ನಾನು ಆಮೇಲೆ ಹೇಳುತ್ತೇನೆ. ಪೋಲೀಸರು ಮಾಡಿದ್ದು ತಪ್ಪು ಅಥವಾ ಸರಿ ಎಂದು ಹೇಳುವುದಿಲ್ಲ. ಇವರನ್ನು ನಾನು ಡಿಫೆಂಡ್ ಮಾಡುವುದಕ್ಕೆ ಎಂದು ಖಂಡಿತವಾಗಿಯೂ ವಾದ ಮಾಡುತ್ತಾ ಇಲ್ಲ. ಇದನ್ನು ನಾನು ಸಭೆಗೆ ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇನೆ. ಆದರೆ, ನನಗೆ ಗೊತ್ತಿರತಕ್ಕ ವಿದ್ಯಮಾನಗಳ ಪ್ರಕಾರ, ಆತ ಮೊದಲು ಹೋಗಿ ವಾರನ್ ಮಾಡಿ ಬರುತ್ತಾನೆ. ಪುನಃ 12 ಘಂಟೆಗೆ ರಾಘವ ಕೋಟ್ಯಾನ್ ಬರುತ್ತಾನೆ. ಇದನ್ನು ತಿಳಿಸಿದಾಗ, ಮತ್ತೆ ಸಬ್ ಇನ್‌ಸ್ಪೆಕ್ಟರ್ 12-30 ಗಂಟೆಗೆ ಹೋಗುತ್ತಾರೆ. ಇದನ್ನು ಮಾತ್ರ ನಾನು ತಮಗೆ ಸ್ಪಷ್ಟ ಮಾಡುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ. ನಾನು ತಮ್ಮ ಪ್ರಾಮಾಣಿಕತೆಯನ್ನು ಪ್ರಶ್ನೆಮಾಡುತ್ತಾ ಇಲ್ಲ ; ನಾನು ಯಾವುದಕ್ಕೂ ಇಲ್ಲಿ ಬಣ್ಣ ಹಚ್ಚಲಿಕ್ಕೆ ಹೋಗುವುದಿಲ್ಲ. ಇವತ್ತು ಸಭೆಗೆ ವರದಿ ಕೊಟ್ಟಿದ್ದರಲ್ಲಿ 12ನೇ ತಾರೀಖು ಸಿ. ಒ. ಡಿ. ಎನ್‌ಕ್ವೈರಿಗೆ ಹೋಗಿದ್ದಾರೆಂದು ಹೇಳಿದ್ದೀರಿ. To-day in your own reply, how our top officers are going to mislead the House by giving a reply through you, that is more important. It is alleged that the Sub-Inspector of Bajpe Police Station was present along with one Head Constable. Even now they will stick to that point. Even now they are telling though this report or the statement is sent through all senior officers, S. P., D. I. G., Home Secretary.

ಈಗ ಅದನ್ನೇ ಪ್ರತಿಪಾದನೆ ಮಾಡಲಿಕ್ಕೆ ಹೊರಟಿದ್ದಾರೆ. ಇದರಿಂದ ನನ್ನ ಮನಸ್ಸಿಗೆ ಆಗತಕ್ಕ ನೋವು ಅಷ್ಟಿಷ್ಟಲ್ಲ. ಹಿರಿಯ ಅಧಿಕಾರಿಗಳು, ಐ.ಎ.ಎಸ್. ಅಧಿಕಾರಿಗಳನ್ನು ನಾವು ನೇಮಿಸುವುದು ನಿರುಪಾಯವಾಗಿ ಕೆಲಸ ಮಾಡುತ್ತಾರೆ ಎಂದು. ಆದರೆ, ಈ ಆಶೆಯನ್ನು ನಾವು ಇವತ್ತಿನ ದಿವಸ ಕಳೆದುಕೊಳ್ಳಬೇಕಾಗಿದೆ. ಇಂಥಾ ವಿಧದಲ್ಲಿ ಇವತ್ತಿನ ದಿವಸ ಅವರಿದ್ದಾರೆ. It is alleged they were not present. ಬಂಗಾರಪ್ಪ ಅವರು ಕೊಟ್ಟಿರತಕ್ಕ ಫೋಟೋಸ್ಟ್ಯಾಟ್ ಕಂಪ್ಲೇಂಟ್ ಕಾಪಿ ಆಧಾರದ ಮೇಲೆ ಸಬ್ ಇನ್ಸ್‌ಪೆಕ್ಟರ್‌ರವರು ಅಲ್ಲೇ ಇದ್ದರು ಎಂದು ದೃಢೀಕರಿಸುವುದಕ್ಕೆ ಸಾಧ್ಯ ಎಂದು ಅರ್ಥಮಾಡಿಕೊಳ್ಳಬಹುದು. ಇದಾದಮೇಲೆ, The Director of Prosecution has written a letter to the I.G.P. requesting for an impartial enquiry by entrusting it to the C.O.D. ನನಗೆ ಅರ್ಜಿ ಬಂದಿದೆ, ಅದರ ಆಧಾರದ ಮೇಲೆ ಕಾಲಿಂಗ್ ಅಟೆನ್ಷನ್ ಕಳುಹಿಸಿದ್ದೆ; ಇದಕ್ಕಿಂತ ಮೊದಲು ನಿಲುವಳಿಸೂಚನೆ ಕಳುಹಿಸಿದ್ದೆ. ಈ ಸಭೆ ಪ್ರಾರಂಭವಾದ ಎರಡು ದಿವಸಗಳಾದಮೇಲೆ ನಾವು ಸಿ.ಒ.ಡಿ. ಅವರನ್ನು ಎನ್‌ಕ್ವಯರಿ ಮಾಡಲಿಕ್ಕೆ ಹಾಕಿದ್ದೇವೆ ಎಂದು ಹೇಳಿದರೆ, ನಮ್ಮನ್ನು ಇವತ್ತು ಸಮಾಧಾನ ಮಾಡುವುದಕ್ಕೋಸ್ಕರ ಈ ಕೆಲಸ ಮಾಡಿದ್ದೀರಿ ಎಂದು ಒಂದು ಸಂಶಯ ಬರುತ್ತದೆ. ತಮ್ಮನ್ನು ಕೈಜೋಡಿಸಿ ಬೇಡುತ್ತೇನೆ. ನಿಮಗೆ ಹೃದಯ ಎಂಬುದು ಇದ್ದರೆ, ಈ ವಿಷಯದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. I am not going to attack the Government. This incident took place on 8th January 1975. ಈ ಮಧ್ಯೆ ತಾವು 12ನೇ ತಾರೀಖು ಆರ್ಡರ್ ಮಾಡಿದ್ದೀರಿ • ಮೊನ್ನೆ 4 ಗಂಟೆಗೆ ಪೋಸ್ಟ್ ಹೋಗಿದೆ 3 ಜನ ಅಧಿಕಾರಿಗಳನ್ನು ರಿಲೀವ್ ಮಾಡಿ ಎಂದು ವರ್ಗ ಮಾಡಿ ಎಂದು. ಸ್ವಾಮಿ, ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ನಿಮ್ಮ ಮನಸ್ಸಿಗೆ ಇಷ್ಟು ಘಟನೆ ನಡೆದರೂ, ಇದು ನಿಮಗೆ ಸಮಾಧಾನ ತರುತ್ತದೆಯೇ? ಹಾಸ್ಪಿಟಲ್‌ನಿಂದ ಶವವನ್ನು ತೆಗೆದುಕೊಂಡು ಬಂದಾಗ, ಶವ ಮೆರವಣಿಗೆಯಲ್ಲಿ 4–5 ಸಾವಿರ ಜನ ಸೇರಿದ್ದರು. ಇದರ ಬಗ್ಗೆ ನೀವು ಯಾರನ್ನಾದರೂ ವಿಚಾರಿಸಿ ತಿಳಿದುಕೊಳ್ಳಬಹುದು. ಸುಮಾರು ಇನ್ನೂರು ಜನ ರಿಸರ್ವ್ ಪೋಲೀಸ, 4–6 ಪೋಲೀಸ್ ವ್ಯಾನುಗಳು ಬಂದಿದ್ದವು. ಆದರೆ, ಅವುಗಳು ಬಂದಿದ್ದು, not to give protection to this poor man. ಇದು ನಿಮ್ಮ ಇಲಾಖಾ ಅಧಿಕಾರಿಗಳು ಮಾಡುತ್ತಾ ಇರತಕ್ಕ ಕೆಲಸ. ಆದುದರಿಂದ, ನಾನು ಇವತ್ತು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ಮತ್ತು ಬಂಗಾರಪ್ಪನವರು ಹೇಳಿದ್ದಾರೆ, ಈ ವಿಚಾರದಲ್ಲಿ ತನಿಖೆ ಮಾಡಿ; ಜುಡಿಷಿಯಲ್ ಪ್ರೋಬ್ ಮಾಡಿ, ದೇಶದ ಜನತೆಗೆ ಇದರ ಸತ್ಯಾಸತ್ಯತೆ ಗೊತ್ತಾಗಬೇಕಾಗುತ್ತದೆ. ರಾಷ್ಟ್ರ ಕೊಡತಕ್ಕ ಅವಕಾಶದಲ್ಲಿ ಯಾವುದೇ ವರ್ಗಕ್ಕೆ ಅಸಮಾಧಾನ ಬಾರದೇ ಇರತಕ್ಕ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆಂದು ತೋರಿಸಬೇಕಾದರೆ, ನಾನು ಹೇಳುತ್ತೇನೆ, ಈ ಮೂರು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು, ಆ ಅಧಿಕಾರಿಗಳ ಮೇಲೆ ಕೇಸ್ ರಿಜಿಸ್ಟರ್ ಮಾಡಬೇಕು, ಅವರ ಬಗ್ಗೆ ನ್ಯಾಯವಾಗಿ ವಿಚಾರಣೆ ಆಗಬೇಕು. ಸಂಬಂಧಪಟ್ಟ ಎಸ್.ಪಿ. ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ಇಷ್ಟನ್ನು ಮಾಡದೇ ಹೋದರೆ, ನೀವು ಈ ಸಭೆಯಲ್ಲಿ ಏನು ಬೇಕಾದರೂ ನಿರ್ಣಯ ತೆಗೆದುಕೊಳ್ಳಬಹುದು—ಬಲಾಬಲದ ದೃಷ್ಟಿಯಿಂದ. ಆದರೆ, ದೇಶದ ದೃಷ್ಟಿಯಲ್ಲಿ, ದೇವರ ದೃಷ್ಟಿಯಲ್ಲಿ, ಈ ನಿರ್ಣಯ ಸಮರ್ಪಕವಾಗುವುದಿಲ್ಲ. ಆದುದರಿಂದ ಈ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವಯರಿ ಮಾಡಿಸಬೇಕೆಂದು ತಮ್ಮನ್ನು ನಾನು ಕೈಜೋಡಿಸಿ ಪ್ರಾರ್ಥನೆ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಗೆಳೆಯ ಶ್ರೀ ಬಂಗಾರಪ್ಪ ಮತ್ತು ವಿರೋಧ ಪಕ್ಷದ ನಾಯಕರಾದಂಥ ಶ್ರೀ ದೇವೇಗೌಡರು ಈ ವಿಷಯದ ಮೇಲೆ ವಿವರವಾಗಿ ತಿಳಿಸಿದ್ದಾರೆ. ಈ ವಿಷಯಗಳನ್ನು ಗಮನಿಸಿದ ಮೇಲೆ ನನಗೆ ತೋಚತಕ್ಕದ್ದು ಏನು ಎಂದರೆ, ಇವತ್ತಿನ ದಿವಸ ಆಡಳಿತವನ್ನು ನಡೆಸುತ್ತಾ ಇರತಕ್ಕ ಪಕ್ಷ, ಜನರ ಬೆಂಬಲವನ್ನು ಕಳೆದುಕೊಳ್ಳುತ್ತಾ ಇದೆ ಎಂದು ಗೊತ್ತಾಗುತ್ತದೆ. ಹೀಗೆ ಕಳೆದುಕೊಳ್ಳತಕ್ಕ ಪರಿಸ್ಥಿತಿಯಲ್ಲಿ ಇರುವಾಗ, ತಮ್ಮಲ್ಲಿ ಇರತಕ್ಕ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ, ಪೋಲೀಸಿನವರ ಅಧಿಕಾರವನ್ನೂ ದುರುಪಯೋಗಪಡಿಸಿ, ಅವರ ಮೂಲಕ ತಮ್ಮ ಪ್ರಭುತ್ವವನ್ನು ನಿರ್ಧರಿಸಬೇಕು ಎನ್ನುವ ತೀರ್ಮಾನ ಮಾಡಿದ ಹಾಗೆ ಇವತ್ತಿನ ದಿವಸ ಕಾಣುತ್ತಾ ಇದೆ. ಈಗಾಗಲೇ ನಮ್ಮ ದೇಶದಲ್ಲಿ ಪಶ್ಚಿಮ ಬಂಗಾಳ ಇದಕ್ಕೆ ಒಂದು ಉದಾಹರಣೆ ಆಗಿದೆ. ನಮ್ಮ ರಾಜ್ಯದಲ್ಲಿ ಮೊದಲನೆಯದಾಗಿ, ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭವಾಗಿದೆ ಎಂದು ನಾನು ಹೇಳುತ್ತೇನೆ. ಕಾರಣವೇನೆಂದರೆ, ಇಲ್ಲಿ ಒಂದು ಜಾತಿಯ ದೂರಿನ ಮೇಲೆ ಒಬ್ಬ ಸಬ್ ಇನ್ಸ್‌ಪೆಕ್ಟರ್, 2–3 ಜನ ಕಾನ್‌ಸ್ಟೇಬಲ್‌ಗಳು ಹೋಗಬೇಕಾದಂಥ ಸಂದರ್ಭ ಏನು ಇತ್ತು ಎಂದು ನಾನು ಸರಕಾರವನ್ನು

ಕೇಳುತ್ತೇನೆ. ಒಂದು ಗಹನವಾದ ವಿಷಯದ ಬಗ್ಗೆ ಕಂಪ್ಲೆಂಟ್ ಕೊಟ್ಟರೆ ಸಬ್ ಇನ್‌ಸ್ಪೆಕ್ಟರಲ್ಲ, ಪೋಲೀಸರೇ ಹೋಗುವುದಿಲ್ಲ, ಹಾಗಿರುವಾಗ, ಈ ಸಂದರ್ಭದಲ್ಲಿ 3 ಜನ ಕಾನ್‌ಸ್ಟೇಬಲ್ ಮತ್ತು ಒಬ್ಬ ಸಬ್ ಇನ್‌ಸ್ಪೆಕ್ಟರ್ ಏತಕ್ಕೆ ಅಲ್ಲಿಗೆ ಹೋದರು ? ನನಗೆ ಅರ್ಥವಾಗುವುದಿಲ್ಲ. ಅಲ್ಲಿರತಕ್ಕ ರಾಘವ ಕೋಟ್ಯಾನ್ ಎನ್ನುವವನು ಪೋಲೀಸರ ಎದುರಿನಲ್ಲೇ ಭಾಸ್ಕರ ಸಮಿತ ಅವರನ್ನು ಚೂರಿ ಹಾಕಿ ತಿವಿದಿದ್ದಾನೆ. ಇದು ಹೇಗೆ ಎಂದು ನನಗೆ ಅರ್ಥವಾಗುವುದಿಲ್ಲ. ಪೋಲೀಸರು ಇರತಕ್ಕದ್ದು ನಮ್ಮ ಮೂಲ ಭೂತ ರಕ್ಷಣೆ ಕಾರ್ಯವನ್ನು ನಿರ್ವಹಿಸಲಿಕ್ಕೆ ; ಕಾನೂನು ರಕ್ಷಣೆ ಮಾಡಲಿಕ್ಕೆ ; ಯಾರು ದುರ್ಬಲರಾಗಿರುತ್ತಾರೆ, ಅವರಿಗೆ ರಕ್ಷಣೆ ಕೊಡಲಿಕ್ಕೆ. ಆದರೆ, ಈ ಸಂದರ್ಭದಲ್ಲಿ ಅವರು ಇದನ್ನು ಮಾಡಲಿಲ್ಲ. ಮತ್ತೆ ಏನು ಮಾಡಿದರು ? ಶ್ರೀ ರಾಘವ ಕೋಟ್ಯಾನ್ ಎಂಬುವರು ಆಡಳಿತ ಪಕ್ಷಕ್ಕೆ ಸೇರಿದವರು ; ಇವರು ಅವರಿಗೆ ರಕ್ಷಣೆ ಕೊಟ್ಟಿದ್ದರು ; ಅವರನ್ನು ಚೂರಿ ಹಾಕು ಎಂದು ಹೇಳಿದ್ದು. ಹೆಡ್ ಕಾನ್‌ಸ್ಟೇಬಲ್ ಗೋಪಾಲಕೃಷ್ಣ ಎನ್ನುವವನು ಚೂರಿ ಹಾಕು ಎಂದು ರಾಘವ ಕೋಟ್ಯಾನ್‌ಗೆ ಹೇಳಿದ ಎಂದು it is alleged ಎಂದು ಸರಕಾರ ಹೇಳಿರತಕ್ಕ ಸ್ಟೇಟ್‌ಮೆಂಟ್‌ನಲ್ಲಿ ಕೂಡ ಇದೆ. ಇದು ಪೋಲೀಸಿನವರ ಅಧಿಕಾರದ ದುರುಪಯೋಗ ; ಇದು ಕೇವಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕಡೆ ಮಾತ್ರ ನಡೆಯುತ್ತಾ ಇಲ್ಲ, ರಾಜ್ಯಾದ್ಯಂತ, ಅನೇಕ ಕಡೆ ಈ ರೀತಿಯ ಪ್ರಸಂಗಗಳು ನಡೆಯುತ್ತಾ ಇವೆ.

MR. CHAIRMAN (SRI B. PUTTASWAMY) in the Chair

11-00 A. M.

ರಾಘವ ಕೋಟ್ಯಾನ್ ಅವರು ಆಡಳಿತ ಪಕ್ಷಕ್ಕೆ ಸೇರಿರತಕ್ಕ ಸದಸ್ಯ. ಇಲ್ಲಿ ಸತ್ತಿರತಕ್ಕವನು ಭಾಸ್ಕರ ಸೇಮಿತ ಈತ ವಿರೋಧ ಪಕ್ಷದವನು, ಅಂದರೆ ಸಂಸ್ಥಾ ಕಾಂಗ್ರೆಸ್ಸಿಗೆ ಸೇರಿರತಕ್ಕವನು ಎಂದು ನಾನು ತಿಳಿದುಕೊಂಡಿದ್ದೇನೆ. ಯಾವುದೇ ಪಕ್ಷಕ್ಕೆ ಸೇರಿರಬಹುದು, ಸಂಸ್ಥಾಕಾಂಗ್ರೆಸ್ ವಿರುದ್ಧ ಈ ಭಾಸ್ಕರ್ ಸೇಮಿತಿ ಇರಬಹುದು ಯಾರೇ ಆಗಲಿ ಈ ದೇಶದಲ್ಲಿ ಪ್ರಜೆಗೆ ರಕ್ಷಣೆ ಸಿಕ್ಕ ಬೇಕು. ಗಂಡಾಂತರ ಪರಿಸ್ಥಿತಿಯಲ್ಲಿ ಇರುವಾಗ ರಕ್ಷಣೆ ಕೊಡಬೇಕಾದ್ದು ಪೋಲೀಸರ ಕರ್ತವ್ಯ. ಅವರು ಈ ಕೆಲಸ ಮಾಡಿಲ್ಲ. ಅವರಿಗೆ ಚೂರಿ ಹಾಕಿಸಿದರು. ಪೋಲೀಸಿನವರು ನಡೆದಿರತಕ್ಕ ಕೃತ್ಯ ದಲ್ಲಿ ಇದರ ಜೊತೆಗೆ ಕಾರ್ಯ ನಡೆದದು ಆಯಿತು. ಮಾನ್ಯ ಬಂಗಾರಪ್ಪನವರು ಸಬ್‌ಇನ್‌ಸ್ಪೆಕ್ಟರ್ ಅವರು ಕೊಟ್ಟಿರತಕ್ಕ ಹೇಳಿಕೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದೇರೀತಿ ಮಾನ್ಯ ಮಂತ್ರಿಗಳ ಹೇಳಿಕೆಯು ಇದೆ. ಇವೆರಡು ನೋಡಿದರೆ ಮುಚ್ಚಿಡತಕ್ಕ ವಿವರ ಕೆಳಗಡೆಯಿಂದ ಮೇಲ್ಗಡೆಯವರೆಗೂ ಇವೊತ್ತಿನ ದಿವಸ ನಡೆದಿದೆ. ಇದು ಆಡಳಿತ ಕಾಂಗ್ರೆಸ್ಸಿನ ಮೇಲ್ಮಟ್ಟದ ಚಿತಾವಣಿಯಿಂದ ಆಗಿರ ತಕ್ಕದ್ದು. ಈ ಚಿತಾವಣಿಯಿಂದ ಅಲ್ಲಿರತಕ್ಕ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಇದು ಮಾನ್ಯ ಹುಚ್ಚಮಾಸ್ತಿಗೌಡರು ಓದಿರತಕ್ಕ ಹೇಳಿಕೆಯಿಂದ ಸಬ್‌ಇನ್‌ಸ್ಪೆಕ್ಟರ್ ಅವರು ಕೊಟ್ಟಿರ ತಕ್ಕ ಹೇಳಿಕೆಯಿಂದ ಅರ್ಥವಾಗುತ್ತದೆ. ಎಷ್ಟರಮಟ್ಟಿಗೆ ಅಧಿಕಾರ ದುರುಪಯೋಗವಾಗಿ ನಡೆಯು ತ್ತದೆ ಎನ್ನುವುದು ಗೊತ್ತಾಗುತ್ತದೆ. ರಾಘವ ಕೊಟ್ಯಾನ್ ಅವರು ಆಡಳಿತ ಕಾಂಗ್ರೆಸ್ಸಿಗೆ ಸೇರಿದ ವರಾಗಿರುವುದರಿಂದ ಆತನನ್ನು ಯಾವುದಾದರೂ ರೀತಿಯಲ್ಲಿ ಉಳಿಸಬೇಕೆಂದು ಇವೊತ್ತಿನ ದಿವಸ ಸಾಕಷ್ಟು ಪ್ರಯತ್ನಗಳು ನಡೆದಿವೆ. ಇವರು ಹೇಳಿದ ಮಾತನ್ನು ಕೇಳಿದಂಥ ಸಬ್‌ಇನ್‌ಸ್ಪೆಕ್ಟರ್, ಅಲ್ಲಿರತಕ್ಕ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಕಾನ್‌ಸ್ಟೇಬಲ್ಸ್ ಕಷ್ಟಕ್ಕೆ ಈಡಾಗಿರತಕ್ಕ ಪರಿಸ್ಥಿತಿ ಬಂದಿದೆ. ಅವರನ್ನು ಯಾವರೀತಿಯಿಂದಲಾದರೂ ಉಳಿಸಬೇಕು ಎಂಬ ಸರ್ಕಾರದ ಉದ್ದೇಶ ನೋಡಿದರೆ ನನಗೆ ವ್ಯಥೆಯಾಗುತ್ತದೆ. ಅದಕ್ಕೋಸ್ಕರ ಅವರನ್ನು ರಿಲೀವ್ ಮಾಡಿ ಎಂದು ಮೊನ್ನೆ ದಿವಸ ಒಂದು ಆರ್ಡರ್ ಕಳುಹಿಸಿದ್ದಾರೆ ವಿನಹ ಅವರ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಲಿಲ್ಲ. ಒಂದು ಮರ್ಡರ್ ಕೇಸ್ 302 ಪ್ರಕಾರ ರಿಜಿಸ್ಟರ್ ಮಾಡಿದ್ದಾರೆ, ಸಾಮಾನ್ಯ ವಾಗಿ ನನಗೆ ಗೊತ್ತಿರತಕ್ಕ 302ರ ಪ್ರಕಾರ ಕೇಸ್ ರಿಜಿಸ್ಟರ್ ಆದರೆ ಯಾರು ಅಪರಾಧಿಗಳಾಗಿರು ತ್ತಾರೆ ಅವರನ್ನು ತಕ್ಷಣ ಹುಡುಕಿ ಲಾಕಪ್‌ನಲ್ಲಿ ಇಡುತ್ತಾರೆ. ಈಗ ಅವರು ಲಾಕಪ್‌ನಲ್ಲಿ ಇಲ್ಲ. ಅಧ್ಯಕ್ಷರು, ನಾವು ಯಾವರೀತಿ ಫ್ರೀಯಾಗಿ ಓಡಾಡುತ್ತೇವೆ. ಅದೇರೀತಿ ಅವರು ಸಹ ಇದ್ದಾರೆ. ಅಂದರೆ ಏನು, ಅವರು ಆಡಳಿತ ಕಾಂಗ್ರೆಸ್ಸಿನವರು ಎಲ್ಲಿ ಬೇಕಾದರೂ ಓಡಾಡಿಕೊಂಡು ಇರಬಹುದು. ಅವರು ಈ ದೇಶದ ಫ್ರೀ ಸಿಟಿಸನ್ ಇರಬಹುದು ಬೇರೆಯವರು ಮಾಡಿದರೆ, ತಪ್ಪು ಇಲ್ಲದಿದ್ದರೂ ಅವರ ಮೇಲೆ ಪೋಲೀಸರನ್ನು ಉಪಯೋಗಿಸಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳು

ವಂತ ಪರಿಸ್ಥಿತಿಗೆ ಇವೊತ್ತಿನ ದಿವಸ ಬಂದಿದೆ. ರಾಜ್ಯದಲ್ಲಿ ವಿರೋಧ ಪಕ್ಷಕ್ಕೆ ಸಂಬಂಧಪಟ್ಟವರನ್ನು ಈ ರೀತಿ ತಂದೊಡ್ಡಬೇಕೆಂದು ಮೇಲ್ಮಟ್ಟದಲ್ಲಿ ನಡೆದಿರತಕ್ಕ ಚಿತಾವಣಿ. ಈ ಒಂದು ಚಿತಾವಣಿಗೆ ಜನತೆ ಕೂಡ ಉತ್ತರ ಕೊಡುವ ಸಂದರ್ಭ ಬಂದಾಗ ಕೊಡುತ್ತಾರೆ. ಈ ಸಂದರ್ಭದಲ್ಲಿ ನನ್ನ ಬೇಡಿಕೆ ಏನು ಎಂದರೆ ಸಮಗ್ರವಾದಂಥ ನಿಜಾಂಶವನ್ನು ಹೊರಗಡೆ ತರಬೇಕಾದರೆ ಮತ್ತು ಈ ಅಧಿಕಾರ ತರಬೇಕಾದರೆ ಮೇಲ್ಮಟ್ಟದಿಂದ ಕೆಳಮಟ್ಟದವರೆಗೆ ಅಧಿಕಾರದ ದುರುಪಯೋಗವಾಗಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ಜನತೆಗೆ ನಾವು ಕೂಡ ಖಾತರಿಪಡಿಸಿಕೊಳ್ಳಬೇಕಾದರೆ ನ್ಯಾಯಾಂಗ ವಿಚಾರಣೆ ಆಗಲೇಬೇಕು. ಇದರಲ್ಲಿ ಯಾರು ಯಾರು ಇವೊತ್ತಿನ ದಿವಸ ಶಾಮೀಲಾಗಿರತಕ್ಕ ಅಧಿಕಾರಿಗಳು ಇದ್ದಾರೆ, ದಕ್ಷಿಣ ಕನ್ನಡ ಜಿಲ್ಲೆ ಪೋಲೀಸ್ ಸಬ್‌ಇನ್‌ಸ್ಪೆಕ್ಟರವರು, ಮತ್ತು ಇನ್‌ಸ್ಪೆಕ್ಟರವರು, ಕಾನ್‌ಸ್ಟೇಬಲ್‌ಗಳು ಯಾರು ಯಾರು ಇದ್ದಾರೆ ಅವರನ್ನು ತಕ್ಷಣ ಸಸ್ಪೆಂಡ್ ಮಾಡುವುದು. ಕೇಸ್ ರಿಜಿಸ್ಟರ್ ಆಗಿರುವವರನ್ನು ಕಾನೂನಿಗೆ ಒಳಪಡಿಸಿ ಅವರನ್ನು ಲಾಕಪ್‌ನಲ್ಲಿ ಇಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಘಟನೆಗೆ ಸಂಬಂಧಪಟ್ಟ ವಿವರಗಳನ್ನು ನಮ್ಮ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಅವರು ಹೇಳಿರತಕ್ಕ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಇನ್ನೊಂದು ಎರಡನೆಯ ಕತೆ ಹೇಳಿದರು. ಸಬ್‌ಇನ್‌ಸ್ಪೆಕ್ಟರ್ ಬೆಳಗ್ಗೆ ಹೋಗಿದ್ದರು ಬಂದಮೇಲೆ ಎರಡನೆ ಸಾರಿ ಹೋದಮೇಲೆ ಘಟನೆ ನಡೆಯಿತು ಎಂದು. ಸಬ್‌ಇನ್‌ಸ್ಪೆಕ್ಟರ ಇದ್ದಲ್ಲಿ ಅಲ್ಲಿರತಕ್ಕ ಮನುಷ್ಯ ಎಫ್.ಐ.ಆರ್ ಕಳುಹಿಸುತ್ತಾರೆ ಬುದ್ಧಿವಂತರಾಗಿದ್ದಾರೆ. ವಿವರ ಹೇಳಿದ ನಂತರ ಹೋಗಿದ್ದೆ ನಡೆಯುತ್ತಿತ್ತು ಎಂಬ ವಿಷಯ ಹೇಳಿದ್ದರೆ ಅನುಮಾನ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ಅದನ್ನು ಏನು ಗೊತ್ತಿಲ್ಲವೇ ಇರತಕ್ಕ ಮನುಷ್ಯ ಹೇಳಬಹುದು, ಸಬ್‌ಇನ್‌ಸ್ಪೆಕ್ಟರ್ ಆಗಿರತಕ್ಕಂಥಾವನು ಎರಡನೇ ಕಥೆ ಕಟ್ಟಿ ಹೇಳುವುದಕ್ಕೆ ಸಾಧ್ಯವಿಲ್ಲ. ಅವನು ಏನು ಕೊಟ್ಟಿದ್ದಾನೆ ಅದನ್ನು ಪ್ರೀಮಾಫೆಸಿ ಟ್ರೂ ಎಂದು ನಾವು ತೆಗೆದುಕೊಳ್ಳಬೇಕೇ. ಇದಕ್ಕಿಂತ ಹಿಂದೆ ಹೋಗುವುದು ಸರಿಯಲ್ಲ. ಯಾರೂ ನಂಬುವುದಕ್ಕಾಗುವುದಿಲ್ಲ, ಇನ್‌ವೆಸ್ಟಿಗೇಷನ್ ಆಫೀಸರ್ ಕೂಡ ನಂಬತಕ್ಕದ್ದಲ್ಲ. ಮಾನ್ಯ ಮಂತ್ರಿಗಳು ಇದನ್ನು ಸಬ್‌ಇನ್‌ಸ್ಪೆಕ್ಟರ್ ವರದಿಗಿಂತ ಹಿಂದೆ ಹೋಗಬಾರದು. ಒಂದುವೇಳೆ ಹೋಗುವುದಾದರೆ ದಯವಿಟ್ಟು ಪೋಲೀಸ್ ರಿಪೋರ್ಟ್ ಹಾಜರುಪಡಿಸಿ. ಅವನು ಹೋಗಿದ್ದಕ್ಕೆ ದಾಖಲೆ ಇದ್ದರೆ ನೀವು ಹೇಳಿದ್ದನ್ನು ಒಪ್ಪುತ್ತೇನೆ, ಇಲ್ಲದಿದ್ದರೆ ಖಂಡಿತ ಇದಕ್ಕಿಂಥ ಹಿಂದೆ ಹೋಗಬೇಡಿ. ಜೊತೆಗೆ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಮೊದಲನೇ ಅಧ್ಯಾಯ ಪೋಲೀಸ್ ಆ್ಯಕ್ಟ್ ಹೇಳುವುದು ಯಾವುದೇ ಕಾಗ್‌ನಿಸಬಲ್ ಅಫೆನ್ಸ್ ಪೋಲೀಸ್ ಅಧಿಕಾರಿ ಮುಂದೆ ನಡೆದರೆ ವಿತೌಟ್ ವಾರಂಟ್ ಅರೆಸ್ಟ್ ಮಾಡಬೇಕು ಎಂದು ಇರುತ್ತದೆ. ಇದು ಮೊದಲನೇ ಅಧ್ಯಾಯ ಇದು ಮಾಡದೇ ಹೋದರೆ ಅಧಿಕಾರಿ ಶಿಕ್ಷೆಗೆ ಅರ್ಹನಾಗುತ್ತಾನೆ. ಈ ದುರ್ಘಟನೆ ಪೋಲೀಸ್ ಅಧಿಕಾರಿಗಳ ಮುಂದೆ ನಡೆದಿರತಕ್ಕದ್ದು. ಈ ದುರ್ಘಟನೆ ನಡೆದಾಗ ಹೊಡೆತ ಬಿದ್ದಿದೆ, ಯಾರಿಗೆ ಹೊಡೆತ ಬಿದ್ದಿದೆ ಇಲ್ಲವೆ, ಕಾಗ್‌ನಿಸಬಲ್ ಅಫೆನ್ಸ್ ನೋಡಿದಾಗ ತಕ್ಷಣ ಅಲ್ಲಿರತಕ್ಕವರಲ್ಲಿ ಯಾರು ತಪ್ಪಿತಸ್ಥರು ಎಂಬ ಭಾವನೆ ಬರುತ್ತದೆ ಅವರೆಲ್ಲರನ್ನೂ ದಸ್ತಗಿರಿ ಮಾಡತಕ್ಕದ್ದು ಅವರ ಮೊದಲನೇ ಕರ್ತವ್ಯವಾಗಿತ್ತು. ಈ ಕರ್ತವ್ಯವನ್ನು ಏತಕ್ಕೆ ನಿರ್ವಹಿಸಲಿಲ್ಲ ? ಜೊತೆಗೆ ಇವೊತ್ತು ಹೇಳಿಕೆಯಲ್ಲಿ ಏನು ಕೊಟ್ಟಿದ್ದಾರೆ ಕ್ರೈಮ್ ನಂ. 4/70 ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿದ್ದಾರೆ, 23 ಜನರನ್ನು ದಸ್ತಗಿರಿಮಾಡಿ ತಾರೀಖು 9ನೇ ಜನವರಿ 1975 ರಂದು ಕೋರ್ಟಿನ ಮುಂದೆ ಹಾಜರ್‌ಪಡಿಸಿ ಅವರನ್ನು ರಿಲೀಸ್ ಮಾಡಿದ್ದಾರೆ. ಅನಂತರ ಮ್ಯಾಜಿಸ್ಟ್ರೇಟ್ ಅವರು ಕೆಲವರನ್ನು ಆಸ್ಪತ್ರೆಗೆ ಕಳುಹಿಸಿ ಟ್ರೀಟ್‌ಮೆಂಟ್ ಕೊಡಿಸಿದ್ದಾರೆ. ಈ ಭಾಸ್ಕರ ಸೇಮಿತ ಇದ್ದಾರಲ್ಲ ಇವರು ಮಂಗಳೂರಿನ ಆಸ್ಪತ್ರೆಗೆ ಅದೇ ದಿವಸ ಮಧ್ಯಾಹ್ನ ಸುಮಾರು 2-15 ಗಂಟೆಗೆ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಡಾಕ್ಟರ್ ಸರ್ಟಿಫಿಕೇಟ್ ಪಡೆದಿದ್ದಾರೆ. ಆಗ ಭಾಸ್ಕರ್ ಸೇಮಿತ ಎನ್ನುವವನು ಕೂಡ ಈ ಪೋಲೀಸ್ ಅಧಿಕಾರಿ ಎದುರಿನಲ್ಲಿ ಘಟನೆ ನಡೆದ ಕಾಲದಲ್ಲಿ ಇದ್ದವರು ಡಾಕ್ಟರ್ ಕೊಟ್ಟಿರತಕ್ಕ ಸರ್ಟಿಫಿಕೇಟ್ ಪರೀಕ್ಷೆ ಮಾಡಿದಾಗ ಧಾರಾಕಾರವಾಗಿ ರಕ್ತ ಸುರಿಯುತ್ತಿತ್ತು ಎಂದು ಹೇಳಿದ್ದಾರೆ. ಪೋಲೀಸ್ ಎದುರಿಗೆ ಇರುವಾಗ ಘಟನೆ ನಡೆದು, ಘಟನೆಯಲ್ಲಿ ಗಾಯಗೊಂಡಿರತಕ್ಕ ಎಲ್ಲಾ ವ್ಯಕ್ತಿಗಳನ್ನು ವಿಚಾರಣೆ ಕಾಲದಲ್ಲಿ ಯಾರು ತಪ್ಪಿತಸ್ಥರಾಗುತ್ತಾರೆ, ಯಾರಿಗೆ ಶಿಕ್ಷೆ ಬರುತ್ತದೆ ಯಾರು ವಿಚಾರಣೆಗೆ ಒಳಪಟ್ಟಿರತಕ್ಕದ್ದು, ಅಪರಾಧಿ ಯಾರು, ಫಿರ್ಯಾದಿ ಯಾರು ಎಂಬುದು ಎಲ್ಲಾ ಬರುತ್ತದೆ—ತತ್‌ಕ್ಷಣ ಆಸ್ಪತ್ರೆಗೆ ಸೇರಿಸಿ ವಾಸಿ ಮಾಡತಕ್ಕದ್ದು ಪೋಲೀಸರಿಗೆ ಸೇರಿದ್ದು, ಇದನ್ನು ಏತಕ್ಕೆ ಪೋಲೀಸ್ ಅಧಿಕಾರಿಗಳು ಮಾಡಲಿಲ್ಲ ?

ಈ ಘಟನೆ ಆದಮೇಲೆ 17ನೇ ತಾರೀಖು ಅತ ಸತ್ತಿದ್ದಾನೆ. ಈ ಮಧ್ಯೆ ಎಸ್. ಪಿ. ಹೋಗಿ ಏತಕ್ಕೆ ಅವರನ್ನು ದಸ್ತಗಿರಿ ಮಾಡಲಿಲ್ಲ ? ತನಿಖೆ ನಡೆಸಿ ಕೂಡಲೇ ಅವನ ಮೇಲೆ ಏತಕ್ಕೆ ಕ್ರಮ ತೆಗೆದು ಕೊಳ್ಳಲಿಲ್ಲ ? ಎಸ್. ಪಿ, ಡಿ. ವೈ. ಎಸ್. ಪಿ., ಮತ್ತು ಸಬ್‌ಇನ್‌ಸ್ಪೆಕ್ಟರ್ ಇವರೆಲ್ಲರೂ ಸೇರಿ ಯಾವ ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳಬೇಕಾಗುತ್ತದೆ. ಐ.ಪಿ.ಸಿ. 302ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿದರೇ ? ಪ್ರಮುಖ ಪೋಲೀಸ್ ಅಧಿಕಾರಿಗಳು ಯಾವ ಕ್ರಮವನ್ನು ಕಾನೂನು ಪ್ರಕಾರ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ಅವರು ನಿರ್ವಹಿಸಿಲ್ಲವೆಂದು ಸ್ಪಷ್ಟ ವಾಗಿ ಗೊತ್ತಾಗುತ್ತದೆ. ಯಾವಾಗ ಪ್ರೇಮಾ ಫೆಸಿ ಕೇಸ್ ಇದ್ದಮೇಲೆ ಇನ್ನು ಯಾರಾದರೂ ಇದರಲ್ಲಿ ಸೇರಿರಬಹುದು, ಯಾರೇ ಸೇರಿರಲಿ, ಐ.ಪಿ.ಸಿ. 302ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ ಕೂಡಲೇ ಪೋಲೀಸ್ ಕಸ್ಟಡಿಗೆ ತೆಗೆದುಕೊಳ್ಳುವುದು ಅವರ ಮೊದಲನೇ ಕರ್ತವ್ಯ ಮತ್ತು ಜವಾಬ್ದಾರಿ ಇದೆ ಎಂದು ಅದನ್ನೇ ಮತ್ತೆ ಹೇಳಬೇಕಾಗಿದೆ. ಈ ಕೇಸಿನಲ್ಲಿ ಅಧಿಕಾರಿಗಳು ಆಸಕ್ತಿ ವಹಿಸಿದ್ದಾರೆನ್ನುವುದು ಇದರಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಇದನ್ನು ಮುಚ್ಚುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ ಎನ್ನುವುದೇ ನಮ್ಮ ಮುಖ್ಯವಾದ ಅಪಾದನೆ. ಆದ್ದರಿಂದ ಇದು ಸತ್ಯವಾಗಿ ಚೆನ್ನಾಗಿ ವಿಚಾರಣೆ ನಡೆಯಬೇಕಾದರೆ ನಿಜವಾಗಿಯೂ ಸತ್ಯ ಶೋಧನೆ ಆಗಬೇಕು. ಸರ್ಕಾರದ ಇರಾದೆಯೂ ಕೂಡ ಅದೇ ಆಗಿದ್ದರೆ ಕಾನೂನು ಪ್ರಕಾರ ಇದು ದೃಢ ಪಡಲೇಬೇಕು ಎನ್ನುವ ಆಸೆ ಸರ್ಕಾರಕ್ಕೆ ಇದ್ದರೆ ಮೊದಲು ಆ ಅಧಿಕಾರಿಗಳನ್ನು ಕಾನೂನು ಪ್ರಕಾರ ದಸ್ತಗಿರಿಮಾಡಿ ಪೋಲೀಸ್ ಕಸ್ಟಡಿಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಇಬ್ಬರು ಅಧಿಕಾರಿಗಳನ್ನು ಮತ್ತು ಆ ರೋಗಿಯನ್ನು ಪೋಲೀಸ್ ಕಸ್ಟಡಿಗೆ ಮೊದಲು ತೆಗೆದುಕೊಳ್ಳುವುದು ಕಾನೂನಿನ ನಿಯಮ. ಮಾನ್ಯ ಸ್ನೇಹಿತರೆಲ್ಲರೂ ಹೇಳಿದಂತೆ ಇವರ ಬಗ್ಗೆ ನಿಷ್ಪಕ್ಷಪಾತವಾದ ನ್ಯಾಯಾಂಗ ತನಿಖೆ ನಡೆಸುವುದು ಬಹಳ ಅವಶ್ಯಕ. ಹಿಂದೆ ಸೊಂಡೂರಿನಲ್ಲಿ ಶ್ರೀಮಾನ್ ತಿಮ್ಮಪ್ಪನವರಿಗೆ ಪೋಲೀಸರು ಸಾಮಾನ್ಯವಾದ ಹಿಂಸೆಯನ್ನು ಕೊಟ್ಟರೆ ? ಕೊಡಬಾರದಂತ ಹಿಂಸೆಯನ್ನು ಕೊಟ್ಟಿದ್ದಾರೆ. ಅದು ನಮಗೆಲ್ಲಾ ಚೆನ್ನಾಗಿ ಗೊತ್ತಿದೆ. ಇಲ್ಲಿ ಪೋಲೀಸ್ ಅಧಿಕಾರಿ ತಪ್ಪಿತಸ್ತನಾದ ಮೇಲೆ ಅದೇ ಸ್ಥಳದಲ್ಲಿ ಅದೇ ಅಧಿಕಾರದಲ್ಲಿ ಇರಬೇಕೇ ? ಆ ರೀತಿ ಅತ ಅಲ್ಲಿ ಇದ್ದರೆ ಅವನಿಗೆ ಬೇಕಾದ ಹಾಗೆ ಸಾಕ್ಷಿಗಳನ್ನು ಹೇಳಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಕಾನೂನು ಪ್ರಕಾರ ಮೊದಲು ಯಾರು ತಪ್ಪಿತಸ್ತ ಅಧಿಕಾರಿ ಇದ್ದರೆ ಕೂಡಲೇ ಅವನನ್ನು ಕಾನೂನು ಪ್ರಕಾರ ಸಾಮಾನ್ಯ ಪ್ರಜೆಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಅದೇ ಕ್ರಮ ಅವನ ಮೇಲೆ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯವೆಂದು ಹೇಳುತ್ತೇನೆ. ಯಾವುದೇ ವಿಚಾರಣೆಯಲ್ಲಿಯೂ ತಪ್ಪಿತಸ್ತನನ್ನು ಪೋಲೀಸ್ ಕಸ್ಟಡಿಯಿಂದ ಸೆಷನ್ಸ್ ವಿಚಾರಣೆ ಮುಗಿಯುವವರೆಗೆ ಹೊರಗೆ ಬಿಟ್ಟಿದ್ದಾರೆಯೇ ? ಆ ಕೇಸು ಖುಲಾಸೆಯಾದ ಮೇಲೆ ಬಿಟ್ಟಿದ್ದಾರೆ. ಕ್ರಿಮಿನಲ್ ಪ್ರೊಸೀಜರ್ ಕೋಡ್ 302ರ ಪ್ರಕಾರ ಪೋಲಿಸ್ ಅಧಿಕಾರಿಯೆಂಬ ಕಾನೂನನ್ನು ಉಲ್ಲಂಘನೆ ಮಾಡಿದರೆ ಇದು ಹೇಗೆ ಇದೆ ಎಂದರೆ, ಬೇಲಿ ಎದ್ದು ಹೊಲವನ್ನು ಮೇಯ್ದ ರೀತಿಯಾಗುತ್ತದೆ. ಇನ್ನು ನ್ಯಾಯ ಎಲ್ಲಿ ಸಿಕ್ಕುತ್ತದೆ ? ಸತ್ಯಕ್ಕೆ ಮಾನ್ಯತೆ ದೊರೆಯುತ್ತದೆಯೇ ? ಪ್ರಾಮುಖ್ಯವಾಗಿ ಒಂದು ಆಡಳಿತದೃಷ್ಟಿಯಿಂದ ನೀವು ನಡೆಯುತ್ತಿದ್ದರೆ ಕೂಡಲೇ ಐ.ಪಿ.ಸಿ. 302ರ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಅನ್ನತಕ್ಕಂಥಾದ್ದನ್ನು ನಾನು ಬಹಳ ಅಗ್ರಹ ಪೂರ್ವಕವಾಗಿ ಸರ್ಕಾರಕ್ಕೆ ಹೇಳಲಿಚ್ಛಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ). —ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅನೇಕ ಮಾನ್ಯ ಮಿತ್ರರು ನಡೆದ ಘಟನೆಯ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪಮಾಡಿದ್ದಾರೆ. ಅದನ್ನೇ ಹೊಂದಿದಂತೆ ಕೆಲವು ಅಂಶಗಳನ್ನು ಮನವರಿಕೆ ಮಾಡಿಕೊಡುವುದು ನಮ್ಮ ಕರ್ತವ್ಯ. ನಡೆದಿರತಕ್ಕಂಥ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಲು ಮನವರಿಕೆಯಾಗುವಂತೆ ಯಥೋಚಿತವಾದ ಎರಡು ಮಾತುಗಳನ್ನು ಆಡಲು ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, 1972ರಿಂದ ಈ ಮಹನೀಯರು ಅಧಿಕಾರ ವಹಿಸಿ ಆಡಳಿತ ನಡೆಸುವುದಕ್ಕೆ ಪ್ರಾರಂಭ ಮಾಡಿದಂದಿನಿಂದ ರಾಜ್ಯದ ಎಲ್ಲಾ ಮೂಲೆಗಳಲ್ಲೂ ಎಲ್ಲಾ ವರ್ಗದ ಜನರು ತುಳಿಯಲ್ಪಡುತ್ತಿದ್ದಾರೆ. ಸುಡಲ್ಪಡುತ್ತಿದ್ದಾರೆ. ಕೊಲ್ಲಲ್ಪಡುತ್ತಿದ್ದಾರೆ, ದೋಚಲ್ಪಡುತ್ತಿದ್ದಾರೆ. ಶಾಸನ ಸಭೆಯಲ್ಲಿ ಮಾತ್ರವೇ ಅಲ್ಲ ಪಕ್ಷದ ಎಲ್ಲಾ ಗುಂಪನ್ನು ಕಬಳಿಸಿ ನಿಂತಮೇಲೆ ಇನ್ನು ನೀತಿಯ ರಕ್ಷಣೆ ಎಲ್ಲಿಂದ ಬರಬೇಕು ? ಆಡಳಿತ ವಹಿಸಿರತಕ್ಕಂಥ ಮಂತ್ರಿ ಮತ್ತು ಅಧಿಕಾರಿ ಇದಕ್ಕೆ ಜವಾಬ್ದಾರಿಯೆಂದು ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಪೋಲೀಸ ಅಧಿಕಾರಿ ಯಾರು ಇದ್ದಾರೆ ಐ.ಜಿ.ಪಿ. ಇವರು ದಕ್ಷರು ಆದರೆ ಮಾತ್ರ ರಾಜ್ಯದಲ್ಲಿ ನಡೆಯುವ ದುರ್ಘಟನೆಗಳನ್ನು ನೀಗಿಸಲು ಸಾಧ್ಯವೇ ಹೊರತು ಇಲ್ಲದಿದ್ದರೆ ಬೇರೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಆದ್ದರಿಂದ ತಮ್ಮ ಮುಖಾಂತರ ಸರ್ಕಾರಕ್ಕೆ ಮನವರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಈ ರಾಜ್ಯದಲ್ಲಿ ಅನೇಕ

ಸತ್ಸಂಪ್ರದಾಯಗಳನ್ನು ಹಾಕಿದಂಥ ಮಹಾನ್ ವ್ಯಕ್ತಿಗಳು ಇದ್ದಾರೆ. ಹಿಂದೆ ಪೋಲೀಸ್ ಖಾತೆಯನ್ನು ವಹಿಸಿದ್ದಂಥ ಶ್ರೀಮಾನ್ ಸಿದ್ದಲಿಂಗಯ್ಯನವರು ಕೇವಲ ಒಂದು ತಾಮ್ರದ ತಂತಿಯ ಪ್ರಕರಣ ಬಂದಾಗ ಕೂಡಲೇ ಮಂತ್ರಿ ಪದವಿಯನ್ನು ಬಿಟ್ಟುಕೊಟ್ಟರು. ಶ್ರೀ ಎಂ. ವಿ. ರಾಮರಾಯರು, ಪೋಲೀಸ್ ಖಾತೆಯ ಮಂತ್ರಿಗಳಾಗಿದ್ದಾಗ ಮಧುಗಿರಿ ಪ್ರಕರಣದಲ್ಲಿ ಪೋಲೀಸರು ಹಳ್ಳಿಯ ಜನರ ಮೇಲೆ ಹಲ್ಲೆ ನಡೆಸಿದರೆಂಬ ಆಪಾದನೆ ಬಂದ ಕೂಡಲೇ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು. ನಾನು ಈ ಪ್ರಸ್ತಾಪ ಏತಕ್ಕೆ ಮಾಡಿದೆ ಎಂದರೆ ಇಂಥಹ ಸತ್ಸಂಪ್ರದಾಯಗಳನ್ನು ಹಾಕಿ ಹೋಗಿದ್ದಾರೆ. ಯಾವುದೇ ಅಧಿಕಾರಿಯ ಮೇಲೆ ಅಥವಾ ಮಂತ್ರಿಗಳ ಮೇಲೆ ಆಪಾದನೆ ಬಂದಾಗ [illegible] ವಿಚಾರಣೆ ನಡೆಸುವುದು ಒಂದು ಸತ್ಸಂಪ್ರದಾಯವೆಂದು ಹೇಳಬೇಕಾಗುತ್ತದೆ. ಇದ್ದಾಗ್ಯೂ, [illegible] ಜನರು ಮಾತ್ರವೇ ಅಲ್ಲ ಇಲ್ಲ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರಿಗೂ [illegible] ತರಹದ [illegible]ದೆ. ಹಿಂದೆ ಒಂದು ಸಾರಿ ಶ್ರೀ ಎಚ್. ಎಚ್. [illegible] ರಂಗನಾಥ ಅವರು ಈ ಮಾನ್ಯ ಸಭೆಯ ಸದಸ್ಯರು ಅವರ ಮನೆಗೆ ನುಗ್ಗಿ ಅವರ ಸಕಲ ವಸ್ತುಗಳನ್ನು ನಾಶ ಮಾಡಿದ್ದಾರೆ. ನಾನು ಕೇವಲ ಪಕ್ಷ, ಪ್ರತಿಪಕ್ಷದ ದೃಷ್ಟಿಯಿಂದ ಹೇಳುತ್ತಿಲ್ಲ. ಇನ್ನು ಪ್ರಾಮಾಣಿಕವಾಗಿ [illegible] ಹೇಳಬೇಕೆಂದು. ಅನೇಕ ಹರಿಜನರ ಮನೆಗಳನ್ನು ಸುಟ್ಟುಬಿಟ್ಟಿದ್ದಾರೆ. ಹರಿಜನರೇ ಇರಲಿ ಸವರ್ಣೀಯರೇ ಇರಲಿ ಎಲ್ಲರಿಗೂ ಈ ರಾಜ್ಯದಲ್ಲಿ ರಕ್ಷಣೆ ದೊರೆಯಬೇಕು ಎನ್ನುವುದೇ ನನ್ನ ವಾದ. ಈ ಘಟನೆಯ ಬಗ್ಗೆ ಒಂದು ಗಾದೆ ನನಪಿಗೆ ಬರುತ್ತದೆ. ಗಾದೆ [illegible] ನೋಡಿದರೆ [illegible] ನುಗ್ಗುವುದಿಲ್ಲ. ಆಳುವ ಯಜಮಾನ ಸರಿಯಾಗಿ ಇರಬೇಕು. "ಉಳುವವನಿಗೆ [illegible] ಕೊಡು, ಉಳುವವನಿಗೆ ಭೂಮಿ ಕೊಡು" ಎಂದು ಹೇಳುತ್ತಾರೆ. ನಿಮಗೆ ಅಧಿಕಾರ ಕೊಟ್ಟಿದ್ದಕ್ಕೆ ನಮ್ಮನ್ನು ದೋಚಿಸುತ್ತಿದ್ದೀರಿ, ಕೊಲ್ಲಿಸುತ್ತಿದ್ದೀರಿ. ಇದಕ್ಕೆ ಹೊಣೆ ಯಾರು ಎಂದರೆ ಈ ಖಾತೆಯನ್ನು ವಹಿಸಿರತಕ್ಕಂಥ ಮುಖ್ಯ ಮಂತ್ರಿಗಳ ಜವಾಬ್ದಾರಿ ಮತ್ತು ಅವರ ಕೈಕೆಳಗಿನ ಅಧಿಕಾರದಲ್ಲಿ ಇರತಕ್ಕಂಥ ಐ.ಜಿ.ಪಿ. ಜವಾಬ್ದಾರಿ. ಎಲ್ಲಿಯವರೆಗೆ ಇವರು ಪ್ರಾಮಾಣಿಕವಾಗಿ ನಡೆಯುವುದಿಲ್ಲ ಅಲ್ಲಿಯವರೆಗೆ ಜನರಿಗೆ ರಕ್ಷಣೆಯಿಲ್ಲ. ಧರ್ಮಕ್ಕೆ ಮಾನ್ಯತೆ ಸಿಕ್ಕುವುದಿಲ್ಲ. ನೀತಿ ನಿರೂಪಣೆ ಆಗುವುದಿಲ್ಲವೆಂದು ಹೇಳಿದ್ದಾರೆ. ಹಿಂದೆ ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಮ್ಮ ಮುಖ ನೋಡಿ ಜನ ಓಟು ಕೊಡಲಿಲ್ಲವೆಂದು. [illegible] ಪಕ್ಷದವರಿಗೆ ಅಲ್ಲ, ನಮ್ಮ ವಿರೋಧ ಪಕ್ಷದ ಜನರಿಗೂ, ನಮ್ಮ ಸಹೋದ್ಯೋಗಿಗಳಿಗೂ ಬಹಳ [illegible] ನೋಡಿದೆ. ಯಾವ ವ್ಯಕ್ತಿ ಜನಗಳಿಂದ ಆರಿಸಿ ಬಂದಿದ್ದಾರೆ ಅವರಲ್ಲಿ ಭ್ರಷ್ಟ [illegible] ಮತ್ತು [illegible]ಗಳು ಇದ್ದಾಗ್ಗೆ ನಿಮ್ಮಗಳನ್ನು ಜನಗಳು ಆರಿಸಿದ್ದಾರೆ. ಇಂಥಹ [illegible] ವ್ಯಕ್ತಿಗಳಿಗೆ ಅಧಿಕಾರ ಕೊಟ್ಟು ನೀವು ಸುಮ್ಮನೆ ಕುಳಿತುಕೊಳ್ಳಬಾರದು. ಇದು ನಾನು ವಿರೋಧ ಪಕ್ಷದ ಸದಸ್ಯನಾಗಿ ಹೇಳುತ್ತಿಲ್ಲ. ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಅತ್ತ [illegible], ಅದರಲ್ಲಿ [illegible] ಆತ್ಮ ಇದ್ದರೆ, ಧರ್ಮದಲ್ಲಿ ಸತ್ಯ ಇದ್ದರೆ, ನಿಮಗೆ ಅದರಲ್ಲಿ ನಂಬಿಕೆ ಇದ್ದರೆ [illegible] ರಾಜೀನಾಮೆ ಕೊಡಿ ಎಂದು ಮೊದಲು ಐ.ಜಿ.ಪಿ.ಗೆ ಆಜ್ಞೆ ಮಾಡಿ. [illegible] ಕರ್ನಾಟಕದಲ್ಲಿ ಇನ್ನು ಎಷ್ಟು ಜನ ದೇವೇಗೌಡರಂಥವರ [illegible] ಬರಬೇಕು? [illegible] ಕಣ್ಣೀರು ಹಾಕಲಿಲ್ಲ. ಕನ್ನಡ ನಾಡಿನಲ್ಲಿ ಕಣ್ಣೀರಿನ ಹೊಳೆ ಹರಿಯುತ್ತಿದೆ. [illegible] ನಿಮ್ಮಲ್ಲಿ ನೀತಿ ಇದ್ದರೆ, ಭ್ರಷ್ಟಾಚಾರಕ್ಕೆ [illegible] ಕೊಡಬೇಡಿ. [illegible] ಆಗುತ್ತಿರುವ ಘಟನೆಗಳನ್ನು ನೋಡಿದರೆ ಇದೇ ರೀತಿ ಮುಂದುವರಿದರೆ [illegible] ಆಗಲೇಬೇಕು. ಶ್ರೀಮಾನ್ ಹುಚ್ಚಮಾಸ್ತಿಗೌಡರು ಬಹಳ [illegible] ಬಂದಿದ್ದಾರೆ. ಅವರು ಒಳ್ಳೆಯ [illegible] ಮಾಹಿತಿ ಬೇಕು ಎಂದು ಕೇಳಿದರೆ ನಾವು ಹೇಳುವುದಕ್ಕಿಂತ [illegible] ನಡೆದಿರುವುದಕ್ಕೆ [illegible] ಮಾಹಿತಿ [illegible] ಬೇಕೆ? ನಿಜವಾಗಿಯೂ ನಿಮಗೆ ಧರ್ಮದ [illegible] ಇದ್ದರೆ ಕೂಡಲೇ ಶ್ರೀಮಾನ್ ದೇವರಾಜ ಅರಸರವರ ರಾಜೀನಾಮೆ ಕೊಡಬೇಕು. ಐ. ಜಿ. ಪಿ. ಅಧಿಕಾರವನ್ನು ಯಾರು ವಹಿಸಿ ಕೊಂಡಿದ್ದಾರೋ ಅವರು ಮೊದಲು ರಾಜೀನಾಮೆ ಕೊಡಬೇಕು. ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು. ಶ್ರೀಮಾನ್ ಗುಂಡೂರಾಯರಿಗೇ ನಾನು ಈ ಮಾತನ್ನು ಕೈಜೋಡಿಸಿ ಹೇಳುತ್ತಿದ್ದೇನೆ.

ಶ್ರೀ ಆರ್. ಗುಂಡೂರಾವ್.—ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕಾದ್ದು ಮುಖ್ಯವೇ ವಿನಾ ನಿಮಗೆ ರಾಜೀನಾಮೆ ಮುಖ್ಯವಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ದೇಶದಲ್ಲಿ ನಡೆಯುತ್ತಾ ಇರುವ ಅನ್ಯಾಯದ ಪರಂಪರೆ ಇದೆಯಲ್ಲಾ ಅದು ಕೊನೆಗಾಣಬೇಕು ಎನ್ನುವ ದೃಷ್ಟಿಯಿಂದ ಅವರು ಈ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಅನೇಕ ಮುಖಂಡರಿಗೆ ತಾವು ರಕ್ಷಣೆ ಕೊಡುತ್ತಿದ್ದೀರಿ. ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಮತ್ತು ಶ್ರೀಮಾನ್ ಹೆಚ್. ಸಿದ್ದವೀರಪ್ಪನವರು ನಿಮ್ಮ ಇಲಾಖೆಯನ್ನು ನಡೆಸುತ್ತಾ ಇದ್ದರು, ಅವರೇನಾದರೂ ಈ ರೀತಿ ಅನ್ಯಾಯ ಮಾಡಿದ್ದಾರೆ ಎಂದು ಏನಾದರೂ ಕೇಳಿದ್ದೀರಾ ? ಹಿಂದೆ ಶ್ರೀಮಾನ್ ಎಂ. ವಿ. ರಾಮರಾಯರು ಇದ್ದರು, ಅವರು ರಾಜೀನಾಮೆ ಕೊಟ್ಟಿದ್ದಾರೆ. ಆದುದರಿಂದ ಇವರನ್ನು ಏತಕ್ಕೆ ಇಟ್ಟಿದ್ದೀರಿ ? ಅವರೂ ರಾಜೀನಾಮೆ ಕೊಡಲಿ ಎಂದು ಹೇಳುತ್ತೇನೆ. ಇದು ಶ್ರೀಮಾನ್ ದೇವೇಗೌಡರು ಒಬ್ಬರೇ ಕಣ್ಣೀರು ಇಡುವಂಥ ವಿಷಯವಲ್ಲ. ಇದು ಇಡೀ ಕರ್ನಾಟಕದ ಎಲ್ಲ ಜನ ಕಣ್ಣೀರಿಡುವಂಥ ವಿಷಯ. ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸದೇ ಹೋದರೆ ಅವರೆಲ್ಲರೂ ಹೋರಾಟ ನಡೆಸಿಯಾರು. ಆದುದರಿಂದ ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).–ಅಧ್ಯಕ್ಷರೇ, ಒಂದು ನಿಲುವಳಿ ಸೂಚನೆಯನ್ನು ನಮ್ಮ ಸ್ನೇಹಿತರು ಏನು ತೆಗೆದುಕೊಂಡು ಬಂದಿದ್ದಾರೆ ಅದರಲ್ಲಿ ಅನೇಕ ಮುಖ್ಯವಾದ ವಿಷಯಗಳು ಇವೆ ಎಂದು ನನ್ನ ಅಭಿಪ್ರಾಯವಾಗಿದೆ. ಲಿಂಗು ಪೂಜಾರಿ ಮತ್ತು ರಾಘವ ಕೊಟ್ಯಾನ್ ಮಧ್ಯೆ ನಡೆದಂಥ ಘರ್ಷಣೆಯಲ್ಲಿ ಮಧ್ಯೆ ಪ್ರವೇಶ ಮಾಡಿದ ಎಂ. ಭಾಸ್ಕರ ಸೇಮಿತ ಎಂಬುವನಿಗೆ ಚೂರಿ ಹಾಕಿದರು ಅದರಿಂದ ಅವನು ಸತ್ತ ಎನ್ನುವ ವಿವಾದ ಮುಖ್ಯವಲ್ಲ. ಇವೊತ್ತು ಮಾನ್ಯ ಕಂದಾಯ ಸಚಿವರು ಹೇಳಿದ ಹಾಗೆ ಈ ಭೂಸುಧಾರಣೆ ಮಸೂದಾ ಕಾನೂನು ತೆಗೆದುಕೊಂಡು ಬಂದಮೇಲೆ ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲೀಕರ ಮತ್ತು ಗೇಣಿದಾರರ ನಡುವೆ ನಡೆದ ತಿಕ್ಕಾಟ ಅತಿ ತೀವ್ರ ಸ್ವರೂಪದ್ದು ಎಂದು ಎತ್ತಿ ತೋರಿಸುತ್ತಾ ಇದೆ. ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಈವೊತ್ತು ಈ ಮನೆಯಲ್ಲಿ ಈ ಒಂದು ನಿದರ್ಶನ ಮಾತ್ರ ಚರ್ಚೆ ಮಾಡುತ್ತಿದ್ದೇವೆ. ಅದು ನನಗೆ ತಿಳಿದಮಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಾಲೀಕರು ಅನೇಕ ಗೇಣಿದಾರರಿಗೆ ಕಿರುಕುಳ ಕೊಡುತ್ತಿದ್ದಾರೆ, ಅಲ್ಲದೆ ಗೇಣಿದಾರರ ಮೇಲೆ ದಬ್ಬಾಳಿಕೆ ನಡೆಸಿ ಅನೇಕ ಗೇಣಿದಾರರು ಸಾವಿಗೀಡಾಗಿರುವುದು ಉಂಟು. ಇದರ ಬಗ್ಗೆ ಹೆಚ್ಚಿಗೆ ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಭೂಸೇನೆ ಇಂತಹ ವಿಚಾರದಲ್ಲಿ ಹೇಳುವುದಾದರೆ ಈವೊತ್ತಿನ ದಿವಸ ಭೂಸೇನೆಯ ಹೆಸರಿನಲ್ಲಿ ಭೂಮಾಲೀಕರಿಗೆ ರಕ್ಷಣೆ ಕೊಟ್ಟು ಗೇಣಿದಾರರ ಮೇಲೆ ದಬ್ಬಾಳಿಕೆ ನಡೆಸಿ, ದೌರ್ಜನ್ಯ ನಡೆಸಿ ಅವರ ಹತ್ತಿರ ಇರುವ ಜಮೀನನ್ನು ಒಳಪಡಿಸಿಕೊಂಡ ನಿದರ್ಶನಗಳುಂಟು. ಗೇಣಿದಾರರಿಗೆ ರಕ್ಷಣೆ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ಶಾಸನ ಜಾರಿಗೆ ತಂದಿದ್ದೇವೆ ಎನ್ನುವ ದೃಷ್ಟಿ ಅವರಿಗೆ ಇಲ್ಲ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಾ ನಿದರ್ಶನಗಳು ಬೇಕಾದಷ್ಟು ಇವೆ. ಮೊನ್ನೆ ದಿವಸ ನಮ್ಮ ಈ ಮನೆಯ ಉಪಾಧ್ಯಕ್ಷರ ಕಾನ್ಸ್ಟಿಟ್ಯೂಯೆನ್ಸಿಯಾದ ಸೂಪಾದಲ್ಲೂ ಕೂಡ ಈ ರೀತಿಯಾದ ಒಂದು ನಿದರ್ಶನ ನಡೆದಿದೆ. ಆದರೆ ಅದು ಅಷ್ಟು ಉಗ್ರ ಸ್ವರೂಪ ತಳೆದಿಲ್ಲ. ಎಷ್ಟೋ ಜನ ಗೇಣಿದಾರರು ಪ್ರಯೋಜನ ಪಡೆದಿದ್ದಾರೆ. ಆದರೆ ಅವರ ಬಗ್ಗೆ ನಾವು ಅನುಕಂಪ ತೋರಿಸಿಲ್ಲ. ಅದರ ಬಗ್ಗೆ ಚರ್ಚೆ ಮಾಡಿಲ್ಲ. ಮತ್ತು ಆ ಬಗ್ಗೆ ಚರ್ಚೆ ಮಾಡುವುದಕ್ಕೂ ಹೋಗೂ ಇಲ್ಲ. ಆದರೆ ಒಟ್ಟಿನಲ್ಲಿ ಹೇಳುವುದಾದರೆ ಇದು ಏತಕ್ಕೋಸ್ಕರ ಹೀಗಾಯಿತು, ಎನ್ನುವುದನ್ನು ಕಾಗೋಡು ತಿಮ್ಮಪ್ಪನವರೂ ಮತ್ತು ಕಕ್ಕಿಲಾಯ ಅವರು ಮತ್ತು ನಾವೆಲ್ಲಾ ಸೇರಿ ತಿಳಿದುಕೊಳ್ಳಬೇಕಾಗಿತ್ತು. ಅವರು ಒಳ್ಳೆಯವರೋ ಕೆಟ್ಟವರೋ, ಅವರು ಭೂಮಾಲೀಕರ ಪರವಾಗಿ ಹೋರಾಡುತ್ತಾ ಇದ್ದಾರೋ ಅಥವಾ ಗೇಣಿದಾರರ ಪರವಾಗಿ ಹೋರಾಡುತ್ತಾ ಇದ್ದಾರೋ ಆ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಅವರು ವಿ. ಪಿ. ಛೇರ್ಮನ್ ಆಗಿದ್ದರು. ಈ ಘಟನೆ ಏತಕ್ಕೆ ಇಷ್ಟು ವಿಪರೀತಕ್ಕೆ ಹೋಯಿತು ಎಂದು ಜನ ಕೇಳುತ್ತಾರೆ ಮತ್ತು ಅವರ ಸಾವು ಅನ್ಯಾಯ ಅಂತ ಹೇಳುತ್ತಾರೆ. ಆದರೆ ಇದರಲ್ಲಿ ಒಂದು ಗಹನವಾದ ವಿಷಯ ಏನೆಂದರೆ ಮೊದಲನೆಯದಾಗಿ ಪೋಲೀಸಿನವರು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದರೆ ಈ ಘಟನೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಮತ್ತು ಈ ಘಟನೆ ನಡೆದ ಮೇಲೆ ಅವರು ಯಾವರೀತಿಯಾಗಿ ನಡೆದುಕೊಂಡರು ಅದನ್ನೂ ನೋಡಿ. ಅವರು ಈ ಘಟನೆಯನ್ನು ನಡೆಯದೇ ಇದ್ದ ಹಾಗೆ ನೋಡಿಕೊಳ್ಳಬಹುದಾಗಿತ್ತು. ಹೇಗೆಂದರೆ ಮಾನ್ಯ ಬಂಗಾರಪ್ಪನವರು 1974 ರಿಂದಲೂ ಅವರ ಮಧ್ಯೆ ಗೇಣಿ ತೊಂದರೆ ಇತ್ತು ಎನ್ನುವುದನ್ನು ವಿಶದವಾಗಿ ಓದಿ ತಿಳಿಸಿದ್ದಾರೆ. 1974 ರಿಂದ ಲಿಂಗು ಪೂಜಾರಿಗೂ ಮತ್ತು ರಾಘವ ಕೊಟ್ಯಾನ್‌ಗೂ ಗೇಣಿಗೆ ತಕರಾರು ಇತ್ತು ಎಂದ ಮೇಲೆ ಮುನ್ನೆಚ್ಚರಿಕೆ ವಹಿಸಿ ಇಂತಹ ಘಟನೆ ನಡೆಯದೇ ಇದ್ದ ಹಾಗೆ ಪೋಲೀಸರು ನೋಡಿಕೊಳ್ಳಬಹುದಾಗಿತ್ತು. ಅವನನ್ನು ಒಂದೆರಡು ಸಾರಿ ತಡೆದಿದ್ದಾರೆ. ಇದರ ಬಗ್ಗೆ

16-10-1974ರಲ್ಲಿ ಪೋಲೀಸರಿಗೆ ದೂರು ಕೊಟ್ಟಿದ್ದಾರೆ ಮತ್ತು ಡಿ.ಎಸ್.ಪಿ.ಗೂ ಒಂದು ಅರ್ಜಿ ಹಾಕಿದ್ದಾನೆ ಎಂದು ಗೊತ್ತಾಗಿದೆ. ಈ ವಿಷಯ ಡಿ.ಎಸ್.ಪಿ. ತಿಳಿದಿದ್ದರೂ ಸಹಿತ 8-1-1975 ರಲ್ಲಿ ನಡೆದ ಇನ್‌ಸಿಡೆಂಟಿಗೆ ಎಷ್ಟು ಜನ ಪೋಲೀಸರನ್ನು ಕಳುಹಿಸಿದ್ದಾರೆ ಎಂದರೆ ಇಬ್ಬರು ಕಾನ್‌ಸ್ಟೇಬಲ್, ಒಬ್ಬ ಹೆಡ್‌ಕಾನ್‌ಸ್ಟೇಬಲ್, ಒಬ್ಬ ಸಬ್ ಇನ್‌ಸ್ಪೆಕ್ಟರ್, ಇಷ್ಟು ಜನರನ್ನು ಅಲ್ಲಿಗೆ ಕಳುಹಿಸಿದ್ದಾರೆ. ಮಾನ್ಯ ಸಚಿವರು ಹೇಳಿದರು 9 ಗಂಟೆಗೆ ಹುಸೇನ್ ಪಾಷಾ ಎಂಬುವರು ಹೇಳಿದರು ಎಂದು. ನಂತರ ಅದನ್ನು ವಿಚಾರಣೆ ಮಾಡಿದರೆ ಆ ಘಟನೆ $12\frac{3}{4}$ ಗಂಟೆಗೆ ನಡೆದಿದೆ. ಆ ಸಮಯದಲ್ಲಿ ಎಷ್ಟು ಜನ ಪೋಲೀಸಿನವರು ಹೋಗಿದ್ದರು ? ಇದು ಪೋಲೀಸರ ಅದಕ್ಷತೆ ತೋರಿಸುವುದಿಲ್ಲವೇ ? ನಾನೂ ಬೇರೆ ಕಡೆಯೂ ನೋಡಿದ್ದೇನೆ. ಎಲ್ಲಾದರೂ ಒಂದು ಕಡೆ ಘರ್ಷಣೆ ನಡೆದರೆ ಘರ್ಷಣೆ ನಡೆದ ಮೇಲೆ ಪೋಲೀಸರು ಬರುತ್ತಾರೆ. ಹೆಚ್.ಎಂ.ಟಿ.ಯಲ್ಲಿ ಘರ್ಷಣೆ ಆದಾಗ ಪೋಲೀಸಿನವರು ಏನು ಮಾಡಿದರು ಎನ್ನುವುದು ನನಗೆ ಗೊತ್ತು ಮತ್ತು ಹಾಗೆಯೇ ಜಾಲಹಳ್ಳಿಯಲ್ಲಿ ಒಂದು ಘರ್ಷಣೆ ನಡೆದಾಗ ಆ ಘರ್ಷಣೆ ನಡೆದಮೇಲೆ ಬಂದರು. ನನಗೆ ಇದರ ಅನುಭವ ಉಂಟು. ಇದರ ವೇದನೆ ಪ್ರತಿ ದಿನವೂ ನಾನು ಅನುಭವಿಸುತ್ತಿದ್ದೇನೆ. ಕಾರ್ಮಿಕರಿಗೆ ಪೋಲೀಸರಿಗೆ ಘರ್ಷಣೆ ಆದಾಗ ಕೆಲಸಗಾರರನ್ನು ಬಡಿಯುವುದು ಇಂಥಾ ವಿಕೋಪಕ್ಕೆ ಅವರು ಹೋಗುತ್ತಿದ್ದಾರೆ. ಇಂಥಾ ಒಂದು ಪರಿಸ್ಥಿತಿಗೆ ಇದನ್ನು ತಂದಿಟ್ಟಿದ್ದೀರಲ್ಲಾ ಎನ್ನುವುದೇ ನನ್ನ ಒಂದು ದೊಡ್ಡ ಛಾರ್ಜ್. ಪೋಲೀಸಿನವರು ಮನಸ್ಸು ಮಾಡಿದ್ದರೆ ಈ ಒಂದು ಘಟನೆಯನ್ನು ತಪ್ಪಿಸಬಹುದಾಗಿತ್ತು. ನನ್ನ ಇನ್ನೊಂದು ವಿಷಯ ಏನೆಂದರೆ ತಾವು ಮಾತನಾಡುತ್ತಾ ಹೇಳಿದಿರಿ ಎರಡು ಕಡೆಯೂ ಜನ ಜಾಸ್ತಿ ಇದ್ದರು ಪೋಲೀಸಿನವರು ಏನು ಮಾಡುವುದಕ್ಕಾಗುತ್ತದೆ ಎಂದು. ಈ ಕಡೆ ನೂರಾರು ಜನರ ಗುಂಪು, ಆ ಕಡೆ ನೂರಾರು ಜನರಗುಂಪು ಇದೆ ಎಂದು ಪೋಲೀಸರಿಗೆ ಮೊದಲು ಗೊತ್ತಾಗಿರಲಿಲ್ಲವೇ ? ಅವೂ ಅಲ್ಲದೆ ಈ ಒಂದು ಘಟನೆ 19.4ರಿಂದಲೂ ನಡೆದುಕೊಂಡು ಬಂದು 2-3 ಸಾರಿ ಕಟಾವು ವೇಳೆಯಲ್ಲಿ ತಕರಾರು ಆಗಿರಲಿಲ್ಲವೇ ? ಇಷ್ಟು ತಿಳಿದು ಈ ಒಂದು ಘಟನೆ ನಡೆದಿರುವುದನ್ನು ನೋಡಿದರೆ ಇದರಲ್ಲಿ ಪೋಲೀಸರ ಅದಕ್ಷತೆ ಸಂಪೂರ್ಣವಾಗಿ ಇದೆ ಎಂದು ಗೊತ್ತಾಗುತ್ತದೆ. ಆದುದರಿಂದ ಈ ಘಟನೆ ನಡೆಯುವುದಕ್ಕೆ ಮುಖ್ಯ ಕಾರಣಕರ್ತರು ಮೊದಲನೆಯದಾಗಿ ಹೇಳುವುದಾದರೆ ಪೋಲೀಸರ ಮೇಲೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದು ನನ್ನ ಮೊದಲನೇ ಅಪಾದನೆ. ಎರಡನೆಯದಾಗಿ ಹೇಳುವುದಾದರೆ ಸ್ವಲ್ಪ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದರೆ ಪೋಲೀಸರು ಈ ಘರ್ಷಣೆಯನ್ನು ತಡೆಯಬಹುದಾಗಿತ್ತು. ಈ ಘರ್ಷಣೆ ತಡೆದಿದ್ದರೆ ಇದು ಇಷ್ಟೊಂದು ವಿಕೋಪಕ್ಕೆ ಹೋಗಿ ಅವನಿಗೆ ಚೂರಿ ಹಾಕಿ ಸಾಯಿಸುವ ಪರಿಸ್ಥಿತಿಗೆ ಬರುತ್ತಿರಲಿಲ್ಲ.

11-30 A. M.

ಅಲ್ಲದೆ ಚೂರಿ ಹಾಕಿದ ಮೇಲೆ ತಕ್ಷಣ ಚಿಕಿತ್ಸೆ ಕೊಡಿಸುವಂತಹ ಕೆಲಸವನ್ನು ಈ ಪೋಲೀಸ್‌ನವರು ಮಾಡಿಲ್ಲ. ಅವರ ಕರ್ತವ್ಯದಲ್ಲಿ ತಪ್ಪಿದ್ದಾರೆ. ಇದು ಅವರ ಎರಡನೇ ತಪ್ಪು. ಇನ್ನು ನನಗನಿಸುತ್ತದೆ, ಪೋಲೀಸ್‌ನವರದ್ದೇ ತಪ್ಪಾಗಿದ್ದರೂ ಕೂಡ ಅವರನ್ನು ಸಸ್ಪೆಂಡ್ ಮಾಡುವ ಪರಿಸ್ಥಿತಿ ಬರಲಿಲ್ಲ ಎಂದು. ಬರೀ ಟ್ರಾನ್ಸ್‌ಫರ್ ಮಾಡಿದ್ದಾರೆ. ಇದು ಸರಿಯಲ್ಲ. ಈ ಸಸ್ಪೆಂಡ್ ಸಾಮಾನ್ಯವಾಗಿ ಮಾಡುತ್ತಾರೆ ಅಂದರೆ ಅವರ ಮೇಲೆ ಪ್ರೈಮಾಫೇಸಿ ಕೇಸ್ ಇದ್ದರೆ ಪೆಂಡಿಂಗ್ ಎನ್‌ಕ್ವೈರಿ ಯಂದು ಹೇಳಿ ತಕ್ಷಣ ಮಾಡುತ್ತಾರೆ. ಇಲ್ಲಿ ಅಲಿಜ್, ಅಲಿಜ್ ಎಂದು ಹೇಳಿದ್ದಾರೆ. ಇದನ್ನೆಲ್ಲಾ ಓದಿದ ಮೇಲೆ ಏನು ತಿಳಿದು ಬರುತ್ತದೆ ಎಂದರೆ ಪೋಲೀಸರ ಮೇಲೆ ಪ್ರೈಮಾಫೇಸಿ ಕೇಸ್ ಇದ್ದರೂ ಕೂಡ ಅವರನ್ನು ಪೆಂಡಿಂಗ್ ಎನ್‌ಕ್ವೈರಿ ಇಟ್ಟುಕೊಂಡು ಸಸ್ಪೆಂಡ್ ಮಾಡಿಲ್ಲ ಎಂದು. ಮೊದಲು ಅವರನ್ನು ಸಸ್ಪೆಂಡ್ ಮಾಡಿ ಆಮೇಲೆ ಉಳಿದದ್ದು. ಇದನ್ನೆಲ್ಲಾ ನೋಡಿದರೆ ಈ ಸರ್ಕಾರ ಪೋಲೀಸ್‌ನವರಿಗೆ ಎಲ್ಲಿಯವರೆಗೆ ಅಧಿಕಾರ ಕೊಟ್ಟಿದೆ ಎಂಬುದು ಗೊತ್ತಾಗುತ್ತದೆ. ಸರ್ಕಾರ ತಾನು ಜಮೀನ್ದಾರರಿಗೆ ರಕ್ಷಣೆ ಕೊಡುವುದಾಗಿ ಭರವಸೆಗಳನ್ನು ನೀಡುತ್ತದೆ. ಆದರೆ ಇದನ್ನೆಲ್ಲಾ ನೋಡಿದರೆ ನಮಗೆ ಸ್ವಲ್ಪಮಟ್ಟಿಗೆ ನಿರಾಶೆಯುಂಟಾಗಿ ಸರ್ಕಾರದ ಮೇಲೆ ನಂಬಿಕೆ ಹೋಗುವ ಪರಿಸ್ಥಿತಿ ಬರುತ್ತದೆ. ಈಗಾಗಲೇ ದೇಶದಲ್ಲಿ ಕಾರ್ಮಿಕ ವರ್ಗ, ಸರ್ಕಾರದ ಮೇಲೆ ನಂಬಿಕೆಯನ್ನು ಕಳೆದುಕೊಂಡಿದೆ. ಸಾಮಾನ್ಯ ರೈತರೂ ಈಗ ನಂಬಿಕೆಯನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾರೆ. ಹೋಂ ಡಿಪಾರ್ಟ್‌ಮೆಂಟಿನ ಅದಕ್ಷತೆಯಿಂದ, ಅವರೇ ಶಾಮೀಲಾಗಿರುವುದರಿಂದ ಹೀಗೆಲ್ಲಾ ಆಗಿದೆ. ಆದುದರಿಂದ ಇನ್ನು ಮುಂದೆ ಇಂಥಾದ್ದನ್ನೆಲ್ಲಾ ತಪ್ಪಿಸುವುದಕ್ಕೆ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಇದುವರೆಗೂ ಈ ನಿಲುವಳಿ ಸೂಚನೆ ಬಗ್ಗೆ ನನ್ನ ಅನೇಕ ಮಿತ್ರರು ಮಾತನಾಡಿ ಎಲ್ಲ ಅಂಶಗಳನ್ನೂ ಸವಿಸ್ತಾರವಾಗಿ ಹೇಳಿದ್ದಾರೆ. ಆದುದರಿಂದ ಪುನಃ ಅದೇ ಘಟನೆಯ ಬಗ್ಗೆ ನಾನು ಮಾತನಾಡುವ ಅವಶ್ಯಕತೆ ಇಲ್ಲವೆಂದು ನನಗನ್ನಿಸುತ್ತದೆ. ಇನ್ನೊಂದು ದುರ್ದೈವದ ಸಂಗತಿ ದೇಶಕ್ಕೆ ಏನು ಬಂದಿದೆ ಎಂದರೆ, 1972ನೇ ಇಸವಿಯಿಂದ ಈಚೆಗೆ ಇವರು ಅಧಿಕಾರಕ್ಕೆ ಬಂದಮೇಲೆ ನಡೆಯುತ್ತಿರತಕ್ಕಂಥ ಅತ್ಯಾಚಾರಗಳ ಪರಂಪರೆಯನ್ನು ನಿಲ್ಲಿಸುವುದಕ್ಕೆ ತಕ್ಕ ಶಕ್ತಿಯನ್ನು ದೇವರು ಇವರಿಗೆ ಕೊಟ್ಟಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅನೇಕ ಸಂದರ್ಭಗಳಲ್ಲಿ ಏನೊಂದು ದುರ್ಘಟನೆಗಳು ನಡೆದಿವೆ, ನಡೆಯುತ್ತಿವೆ ಅವುಗಳನ್ನು ಸರ್ಕಾರದವರು, ಮಂತ್ರಿಮಂಡಲದವರು ಮನಸ್ಸು ಮಾಡಿದ್ದರೆ ಬಹಳ ಹಿಂದೆಯೇ ತಪ್ಪಿಸಬಹುದಾಗಿತ್ತು ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಎಲ್ಲರೂ ಅದನ್ನೇ ಹೇಳುತ್ತಾ ಇದ್ದರೆ ಹೇಗೆ ?

ಶ್ರೀ ಕೆ. ಎಚ್. ಹನುಮೇಗೌಡ.—ನಾವು ಎಷ್ಟು ಸಾರಿ ಹೇಳಿದರೂ ಆಗುವುದು ಪುನಃ ಪುನಃ ಆಗುತ್ತಲೇ ಇದೆ. ನಿಮಗೆ ವಿವೇಕ ಏನಾದರೂ ಬಂತೇ ಅಂದರೆ ಅದೂ ಇಲ್ಲ. ನನಗನ್ನಿಸುತ್ತದೆ, ಕಲ್ಲುಗಳೂ ಕೂಡ ಕರಗತಕ್ಕಂಥ ದುರ್ಘಟನೆಗಳು ನಡೆದಾಗ, ಅದನ್ನು ನೆನಸಿಕೊಂಡಾಗ ದೇಶದ ಜನತೆಯ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡತಕ್ಕ ಜನತೆಗೆ ನ್ಯಾಯವನ್ನು ದೊರಕಿಸಿಕೊಡತಕ್ಕ ಶಕ್ತಿ ಈ ಸರ್ಕಾರಕ್ಕೆ ಇಲ್ಲ ಎಂದು. ದೇಶದ ಜನಗಳ ದೃಷ್ಟಿಯಲ್ಲಿ ಮೊದಲನೆ ಅಪರಾಧ ಮಾಡಿದ್ದಾರೆ. ಏನಾದರೂ ಶಿಕ್ಷೆ ಆಗಬೇಕಾಗಿದ್ದರೆ ಮೊದಲನೇ ಶಿಕ್ಷೆ ಈ ಮಂತ್ರಿ ಮಂಡಲಕ್ಕೆ ಆಗಬೇಕು. ಇಲ್ಲಿ ನಡೆದಿರತಕ್ಕ ಘಟನೆ ಭೂಮಾಲೀಕರಿಗೂ, ಟೆನೆಂಟ್ಸ್‌ಗೂ ನಡೆದಿರತಕ್ಕದ್ದಲ್ಲ. ಇದರಲ್ಲಿ ಒಬ್ಬ ರಾಜಕೀಯ ಪ್ರಭಾವಿ ವ್ಯಕ್ತಿ, ಇನ್ನೊಬ್ಬ ಅಸಹಾಯಕ ವ್ಯಕ್ತಿ. ಹಿಂದೆ ಸರ್ಕಾರದಲ್ಲಿ ಅಧಿಕಾರ ನಡೆಸಿದಂಥವರು ಯಾರಿದ್ದಾರೆ ಅವರು ''ದುಷ್ಟ ಶಿಕ್ಷಕ, ಶಿಷ್ಟ ಪರಿಪಾಲಕ'' ಎನ್ನುವಂತೆ ಮಾಡುತ್ತಿದ್ದರು, ಆದರೆ ಈಗ ''ದುಷ್ಟ ರಕ್ಷಕ, ಶಿಷ್ಟ ಶಿಕ್ಷಕ'' ಎನ್ನುವ ರೀತಿಯಲ್ಲಿ ನಡೆಯುತ್ತಿದೆ. ಈಗ ನಡೆದಿರತಕ್ಕ ಘಟನೆಯನ್ನು ನೋಡಿದರೆ ಪೋಲೀಸ್ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಕರ್ತವ್ಯ ಭ್ರಷ್ಟರಾಗಿದ್ದಾರೆ. ಅವರು ನ್ಯಾಯಸಮ್ಮತವಾಗಿ ನಡೆದುಕೊಂಡಿದ್ದರೆ, ರೂಲ್ಸ್ ಪ್ರಕಾರ ನಡೆದುಕೊಂಡಿದ್ದರೆ, ಆ ಮನುಷ್ಯನ ಜೀವವನ್ನು ಉಳಿಸಬಹುದಾಗಿತ್ತು. ಆದರೆ ಅವರ ಕರ್ತವ್ಯದಲ್ಲಿ ಲೋಪವಾಗಿದೆ. ಹಾಗೆ ಲೋಪವಾಗಬೇಕಾಗಿದ್ದರೆ ಬಹುಶಃ ಅವರು ಯಾವುದೋ ಆಮಿಷಕ್ಕೆ ಒಳಗಾಗಿರಬೇಕು ಇಲ್ಲವೇ ಯಾವುದೋ ರಾಜಕೀಯ ಒತ್ತಡಕ್ಕೆ ಒಳಗಾಗಿರಬೇಕು. ಹೀಗೆ ಅನೇಕ ವಿಚಾರಗಳು ಇದರಲ್ಲಿ ಅಡಗಿರುವುದರಿಂದ ಹೈಕೋರ್ಟ್‌ನಿಂದ ನ್ಯಾಯಾಂಗ ವಿಚಾರಣೆ ನಡೆದರೆ ಆಗ ನಿಜಾಂಶ ಹೊರಗೆ ಬರುತ್ತದೆ. ಈ ದೃಷ್ಟಿಯಿಂದ ನ್ಯಾಯಾಂಗ ವಿಚಾರಣೆ ನಡೆಯಬೇಕು ಎಂದು ಹೇಳುತ್ತೇನೆ. ಅದು ಆಗುವುದಕ್ಕೆ ಮುಂಚೆ ಯಾವ ಯಾವ ಪೋಲೀಸ್ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆ ಅವರನ್ನು ತಕ್ಷಣ ಸಸ್ಪೆನ್‌ಷನ್‌ನಲ್ಲಿ ಇಡಬೇಕೆಂದು ಹೇಳಿ ಮತ್ತೊಮ್ಮೆ ಸರ್ಕಾರವನ್ನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಬಂದಿರತಕ್ಕಂಥ ಮೂಲಭೂತವಾದ ಪ್ರಶ್ನೆ ಸರ್ಕಾರ ಒಬ್ಬ ನಿರಪರಾಧಿಯ ಕೊಲೆಯಲ್ಲಿ ಶಾಮೀಲಾಗಿದೆ ಎಂಬುದು. ಸರ್ಕಾರ ಅಂದರೆ ಅರ್ಥಾತ್ ಪೋಲೀಸ್ ಇಲಾಖೆ. ನನ್ನ ವಾದವನ್ನು ಪುಷ್ಟಿ ಮಾಡುವುದಕ್ಕೆ, ಅಥವಾ ನಾನು ಒಂದು ತೀರ್ಮಾನಕ್ಕೆ ಬರುವುದಕ್ಕಾಗಿ ಕೆಲವು ಅಂಶಗಳನ್ನು ತಮ್ಮ ಮುಂದಿಡುವುದಕ್ಕೆ ಪ್ರಯತ್ನ ಪಡುತ್ತೇನೆ ಜನವರಿ 8ನೇ ತಾರೀಖು ಏನು ಈ ಒಂದು ಘಟನೆ ನಡೆಯಿತು, ಆಗ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್‌ರವರು ಒಂದು ಫಿರ್ಯಾದು ಕೊಟ್ಟಿದ್ದಾರೆ ಎನ್ನುವುದನ್ನು ಮಾನ್ಯ ಬಂಗಾರಪ್ಪನವರು ಓದಿದರು. ಫಿರ್ಯಾದು ನಮೂದಾಗಿರುವ ರೀತಿಯಲ್ಲಿ ಗಲಭೆ ನಡೆಯುವ ಸಂಭವ ಇದೆ ಎಂದು ಬಾಯಿ ಮಾತು ಹೇಳಿದರು. ಆದುದರಿಂದ ಆ ಸ್ಥಳಕ್ಕೆ ಹೋದೆ, ಆ ಸ್ಥಳದಲ್ಲಿ ಲಿಂಗಪೂಜಾರಿ, ಭಾಸ್ಕರ ಸೇಮಿತ, ಅವರು ಉಗ್ರವಾಗಿ ಆಯುಧಪಾಣಿಗಳಾಗಿ ಆ ಜಾಗದಲ್ಲಿದ್ದರು. ಅನಂತರ ಗಲಭೆ ನಡೆಯಿತು ಎನ್ನತಕ್ಕಂಥಾದ್ದು ಅವರ ಒಂದು ಫಿರ್ಯಾದಿಯಲ್ಲಿ ತಿಳಿದು ಬರುತ್ತದೆ. ಪೋಲೀಸ್ ಅಧಿಕಾರಿಗಳು ಆ ಸ್ಥಳಕ್ಕೆ ಹೋಗುವ ತನಕ ಪೋಲೀಸರೂ ಬರಲಿ ಅವರ ಎದುರಿಗೇ ಹೊಡೆದಾಡೋಣ, ಘರ್ಷಣೆ ಮಾಡೋಣ ಎಂದು ಆ ಆಯುಧಪಾಣಿಗಳು ಕಾಯ್ದುಕೊಂಡಿದ್ದರೇ ಎನ್ನುವುದು ಪ್ರಶ್ನೆ. ಗಲಾಟೆ ಮಾಡಿದ್ದು ಆಗಿದೆ. ಎರಡೂ ಕೋಮಿನವರೂ ಸೇರಿಕೊಂಡಿದ್ದರು. ಅವರು ಬರುವತನಕ ಕಾಯಲಿಲ್ಲ; ಗಲಾಟೆ ಮಾಡುತ್ತಿದ್ದರು. ಪೋಲೀಸರ ಎದುರಿಗೆ ಈ ಕೃತ್ಯ ನಡೆಯಿತು. ಪೋಲೀಸರೆ ಪ್ರತ್ಯಕ್ಷವಾಗಿ ಈ ಘಟನೆಗೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಿದ್ದಾರೆ ಎನ್ನುವುದು ಮೊದಲನೆಯದಾಗಿ ನನ್ನ ವಾದ. ಎರಡನೆಯದಾಗಿ ಈ ಘಟನೆ ನಡೆದಾಗ

ಭಾಸ್ಕರ ಸೇಮಿತಿ ಅವರಿಗೆ ತೀವ್ರವಾಗಿ ಗಾಯಗಳು ಆದಾಗ ಅಲ್ಲಿದ್ದ ನಾಲ್ಕು ಜನ ಪೋಲೀಸ್ ಅಧಿಕಾರಿಗಳು ಅವರನ್ನು ಆಸ್ಪತ್ರೆಗೆ ಸೇರಿಸುವುದು ಮತ್ತು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಅವರ ಕರ್ತವ್ಯವಾಗಿತ್ತು. ಮತ್ತು ಈ ಸಂಬಂಧವಾಗಿ ಅವರ ಕಡೆಯಿಂದ ಫಿರ್ಯಾದಿ ತೆಗೆದುಕೊಂಡು ಕಾನೂನು ಪ್ರಕಾರ ಕ್ರಮವನ್ನು ಜಾರಿಗೊಳಿಸಬೇಕಾಗಿದ್ದದ್ದು ಅವರ ಆದ್ಯ ಕರ್ತವ್ಯವಾಗಿತ್ತು. ಯಾವ ಒಬ್ಬ ಅಧಿಕಾರಿ ಕಾನೂನು ಪ್ರಕಾರ ಇಂತಿಷ್ಟು ಹೊಣೆಗಾರಿಕೆ, ಜವಾಬ್ದಾರಿ ಇದೆ ಎಂದು ಕಾನೂನಿನಲ್ಲಿ ತಿಳಿಯಪಡಿಸಿರುವಾಗ ಹೊಣೆಗಾರಿಕೆಯನ್ನು ನಿರ್ವಹಿಸುವುದರಲ್ಲಿ ಆತನು ಏನಾದರೂ ಹಿಂದೆ ಬಿದ್ದರೆ, ಆತನೇ ಏನಾದರೂ ಪ್ರತ್ಯಕ್ಷವಾಗಿ ಘಟನೆಗೆ ಪ್ರಚೋದನೆ ಮಾಡಿದ್ದರೆ ಆತನು ಶಿಕ್ಷೆಗೆ ಗುರಿಯಾಗುತ್ತಾನೆಂದು ಕಾನೂನಿನಲ್ಲಿ ತಿಳಿದುಕೊಳ್ಳಬಹುದು ಕಾನೂನಿನಲ್ಲಿ ವ್ಯಾಖ್ಯಾನಮಾಡಿ ನಮಗೆ ತಿಳಿಸಿದ್ದಾರೆ. ಆದುದರಿಂದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಇನ್ನಿತರ ಅಧಿಕಾರಿಗಳು ಸೆಕ್ಷನ್ 302ರ ಪ್ರಕಾರ ಪ್ರಚೋದನೆಗೆ ಸಂಬಂಧಪಟ್ಟಹಾಗೆ ಈ ಖೂನಿ ಕೇಸ್‌ನಲ್ಲಿ ಅವರೂ ಸಹ ಮೊದಲನೆಯ ಅಪರಾಧಿಗಳಾಗಿದ್ದಾರೆ ಎನ್ನುವ ವಿಧಿವತ್ತಾದ ಆಧಾರಗಳು ಸಹ ಇವೆ ಇದುವರೆಗೂ ಅದೃಷ್ಟವಶಾತ್ ಒಂದೂವರೆ ತಿಂಗಳ ಒಂದು ಬೋರ್ಡ್ ಸ್ಟೇಟ್‌ಮೆಂಟನ್ನು ಕೂಡ ಶ್ರೀಮಾನ್ ಹುಚ್ಚಮಾಸ್ತಿಗೌಡರು ಸಭೆಯ ಮುಂದಿಟ್ಟಿದ್ದಾರೆ ಈ ಸ್ಟೇಟ್‌ಮೆಂಟಿನಲ್ಲಿ ಅಲೀಜ್ ಅಲೀಜ್ ಎನ್ನತಕ್ಕಂಥ ಪದ ಹತ್ತಾರು ಭಾರಿ ಬಂದಿದೆ. ಶ್ರೀಮಾನ್ ಹುಚ್ಚಮಾಸ್ತಿಗೌಡರು ತಮ್ಮ ವಾದವನ್ನು ಮಂಡಿಸುವ ಕಾಲದಲ್ಲಿ ಮಧ್ಯೆ ಪ್ರವೇಶಿಸಿದ ಶ್ರೀಮಾನ್ ಚನ್ನಬಸಪ್ಪನವರು ನಮಗೆ ಅನುಭವ ಕುದುರಿಸುವ ಹಾಗೆ ವಾದ ಮಾಡುವುದಕ್ಕೆ ಹೊರಟರೆ ಸಾಮಾನ್ಯವಾಗಿ ಅದು ದುರ್ಬಲವಾದ ವಾದ ಮಾತ್ರ ಆಗುತ್ತದೆ. ಸಾಮಾನ್ಯವಾಗಿ ಹಸ್ತಕ್ಷೇಪ ಮಾಡುವುದರಿಂದ ಈಗ ಏನು ಗೊತ್ತಾಗುತ್ತದೆ ಎಂದರೆ ಇದುವರೆವಿಗೂ ಕೊಟ್ಟಿರತಕ್ಕ ಈ ವರದಿಯಲ್ಲಿ ಯಾವ ಒಬ್ಬ ಅಪರಾಧಿಯನ್ನು ದಸ್ತಗಿರಿ ಮಾಡಿದ್ದೇವೆ ಎನ್ನತಕ್ಕ ಮಾತು ಎಲ್ಲೂ ಬರಲಿಲ್ಲ. ಸೆಕ್ಷನ್ 302ರ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿದ್ದೇವೆಂದು ಹೇಳುತ್ತಾರೆಯೇ ಹೊರತು ಅಪರಾಧಿಗಳು ಯಾರು ಎಂದು ಸ್ಪಷ್ಟಪಡಿಸಿಲ್ಲ. ತನಿಖೆ ಈಗಾಗಲೇ ನಡೆದಿರಬಹುದು. ತನಿಖೆಕಾಲ ಇಷ್ಟೊಂದು ವಿಳಂಬವಾಗಿದ್ದರೂ ಸರ್ಕಾರ ಇದುವರೆಗೆ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಅಪರಾಧಿಗಳನ್ನು ದಸ್ತಗಿರಿ ಮಾಡದೆ ಇರುವುದರಿಂದ ಸರ್ಕಾರ ಈ ಅಪರಾಧವನ್ನು ಮುಚ್ಚತಕ್ಕ ಪ್ರಯತ್ನವನ್ನು ಯಶಸ್ವಿಯಾಗಿ ಇದುವರೆಗೂ ಮಾಡಿಕೊಂಡುಬಂದಿದೆ ಎಂದು ನಾನು ಹೇಳಬೇಕಾಗಿದೆ. ಅಲ್ಲದೆ ಸರ್ಕಾರವೇ ಈ ಒಂದು ಕೊಲೆಯಾದುದಕ್ಕೆ ಹೊಣೆಯಾಗಿದೆ ಎಂದು ನಾನು ಹೇಳಬೇಕಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಸಂಪೂರ್ಣವಾದಂತಹ ಹಾಗೂ ನಿಷ್ಪಕ್ಷಪಾತವಾದಂತಹ ಒಂದು ವಿವರಣೆ ಕೊಡಬೇಕೆಂದು ತಮ್ಮಮುಂಥೆ ಮನವರಿಕೆ ಮಾಡಿಕೊಳ್ಳುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅನೇಕ ಹೊಸ ವಿಷಯಗಳನ್ನು ಈ ಸಭೆಯ ಮುಂದೆ ತಿಳಿಸಿದ್ದಾರೆ, ಮತ್ತು ಯಾವ ಯಾವ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು ಹೇಗೆ ನಡೆದುಕೊಳ್ಳಬೇಕಾಗಿತ್ತು, ಮತ್ತು ಹಾಗೆ ನಡೆಯದೆ ಇದ್ದುದರಿಂದ ಈ ಘಟನೆ ನಡೆಯುವುದಕ್ಕೆ ಅವಕಾಶವಾಯಿತು ಎನ್ನುವುದನ್ನೆಲ್ಲಾ ಸವಿಸ್ತಾರವಾಗಿ ಹೇಳಿದ್ದಾರೆ. ಅಷ್ಟೇ ಅಲ್ಲದೆ ಆ ಸ್ಥಳದಲ್ಲಿ ಇದ್ದಂಥ ಅಧಿಕಾರಿಗಳು ಭಾಸ್ಕರ ಸೆಮಿತಾ ಅವರನ್ನು ಚಾಕುವಿನಿಂದ ತಿವಿದಾಗ ಮುಂದಿನ ಕಾರ್ಯಕ್ರಮ ಅಂದರೆ ಅವರನ್ನು ಆಸ್ಪತ್ರೆಗೆ ಸೇರಿಸತಕ್ಕ ಕರ್ತವ್ಯವನ್ನೂ ಸಹ ಮಾಡಲಿಲ್ಲ ಎಂದು ಹೇಳಿ, ಬಹಳ ಮುಖ್ಯವಾದ ವಿಷಯಗಳನ್ನು ತಿಳಿಸಿದ್ದಾರೆ. ನನಗಾದ ಅಸಿಸುತ್ತದೆ ಅವರು ಸಭೆಯ ಮುಂದೆ ಇಟ್ಟಿರತಕ್ಕಂಥ ವಿಷಯಗಳನ್ನು ಗಮನದಲ್ಲಿಟ್ಟು ಕೇಳಿದಾಗ ಸ್ಥಳದಲ್ಲಿದ್ದಂಥ ಅಧಿಕಾರಿಗಳು ಕರ್ತವ್ಯವನ್ನು ಮಾಡಿದ್ದಾರೆಯೇ ಎನ್ನುವ ಕಡೆಗೆ ನನ್ನ ದೃಷ್ಟಿ ಹೋದಾಗ, ಕಡೆಪಕ್ಷ ಸ್ಥಳದಲ್ಲಿಯೇ ಏಟು ತಿಂದು ಬಿದ್ದಿದ್ದಂಥ ಗ್ರಾಮಪಂಚಾಯತಿಯ ಅಧ್ಯಕ್ಷರನ್ನು ಆಸ್ಪತ್ರೆಗೆ ಸೇರಿಸತಕ್ಕ ಕರ್ತವ್ಯವನ್ನು ಅವರು ಮಾಡಬೇಕಾಗಿತ್ತು. ಅದನ್ನು ಮೇಲಧಿಕಾರಿಗಳಿಗೆ ವರದಿ ಮಾಡಬೇಕಾಗಿತ್ತು ಎನ್ನುವುದು ನನ್ನ ಮನಸ್ಸಿಗೆ ಬರುತ್ತದೆ. ಅಲ್ಲದೆ ಪೋಲೀಸ್ ಸಬ್ ಇನ್‌ಸ್ಪೆಕ್ಟರ್‌ರವರು ಕಾಯಿದೆ ಪ್ರಕಾರ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ ಎಂಬ ವಿಷಯವನ್ನು ಕೂಡ ಅವರು ತಿಳಿಸಿದ್ದಾರೆ. ಈ ದೃಷ್ಟಿಯಿಂದ ಸ್ಥಳದಲ್ಲಿದ್ದಂಥ ಸಬ್‌ಇನ್‌ಸ್ಪೆಕ್ಟರ್ ಹೆಸರು ಲೋಕಯ್ಯ ಮತ್ತು ಹೆಡ್ ಕಾನ್‌ಸ್ಟೇಬಲ್ ಗೋಪಾಲ್ ಶೆಟ್ಟಿ ಇವರಿಬ್ಬರನ್ನೂ ಕೂಡಲೇ ಸಸ್‌ಪೆನ್‌ಷನ್‌ನಲ್ಲಿ ಇಟ್ಟು ಮುಂದಿನ ತನಿಖೆ ಕಡೆಗೆ ಹೋಗಬೇಕು ಎನ್ನುವುದು ನನ್ನ ಅಭಿಪ್ರಾಯ. ಅದರಂತೆ ಮುಂದಿನ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಈಗಾಗಲೇ ನೇಮಿಸಿರತಕ್ಕ ಒಬ್ಬ ವಿಶೇಷ ಅಧಿಕಾರಿ ಸ್ಥಳದಲ್ಲಿ ತನಿಖೆ ಕಾರ್ಯ ಮಾಡುತ್ತಿದ್ದಾರೆ. ಅದನ್ನೆಲ್ಲ ತಿಳಿದು ಮುಂದೆ ಯಾವ ಅಧಿಕಾರಿಗಳ ಮೇಲೆ ಕೂಡಲೇ ಮುಂದಿನ ಕ್ರಮವನ್ನು

ತೆಗೆದುಕೊಳ್ಳಬಹುದು ಎನ್ನುವ ವಿಷಯದಲ್ಲಿ ಸ್ವಲ್ಪಮಟ್ಟಿಗೆ ವಿಷಯ ಗ್ರಹಿಸದ ಮೇಲೆ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಏರ್ಪಾಡು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸಿ ಈ ವಿಷಯದಲ್ಲಿ ಯಾವ ಅಧಿಕಾರಿಗಳನ್ನಾಗಲಿ ಅಥವಾ ಇದಕ್ಕೆ ಕಾರಣರಾಗಿರತಕ್ಕ ಯಾರನ್ನೇ ಆಗಲಿ ಕಾನೂನು ಪ್ರಕಾರ ಶಿಕ್ಷೆ ಮಾಡುವುದಕ್ಕೆ ಅವರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಎಳ್ಳಷ್ಟು ಹಿಂದೆಗೆಯುವುದಿಲ್ಲವೆಂದು ನಾನು ಸಭೆಗೆ ಆಶ್ವಾಸನೆ ಕೊಡುತ್ತೇನೆ. ಮುಂದಿನ ಕಾರ್ಯಕ್ರಮಗಳ ಬಗ್ಗೆ ಆಲೋಚನೆ ಮಾಡಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎದರುಪಕ್ಷದ ನಾಯಕರ ಮತ್ತು ಉಳಿದ ಸ್ನೇಹಿತರ ಗಮನಕ್ಕೆ ತಂದು ಈ ವಿಷಯವನ್ನು ಇಷ್ಟಕ್ಕೆ ಬಿಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ.—ಈಗ ಏನು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಅದರ ಬಗ್ಗೆ ಎಂದರೆ ಮೊದಲನೆಯದಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡತಕ್ಕ ನಿರ್ಣಯವನ್ನು ತೆಗೆದುಕೊಂಡಿರುವುದಕ್ಕೆ ನಾನು ಅವರು ಕೊಟ್ಟಂಥ ಉತ್ತರಕ್ಕೆ ಮೆಚ್ಚಿಗೆ ವ್ಯಕ್ತಪಡಿಸುತ್ತೇನೆ. ಎರಡನೆಯದಾಗಿ 302ರ ಪ್ರಕಾರ ರಿಜಿಸ್ಟರಾಗಿರತಕ್ಕ ಸಂದರ್ಭದಲ್ಲಿ ಶ್ರೀಮಾನ್ ತಿಮ್ಮಪ್ಪನವರು ನಿರ್ದಿಷ್ಟವಾಗಿ ಹೇಳಿದ್ದಾರೆ ನಮ್ಮ ಪೋಲೀಸ್ ಇಲಾಖೆಯ ಆದೇಶದಲ್ಲಿ ಕೇಸನ್ನು ರಿಜಿಸ್ಟರ್ ಮಾಡಿಕೊಂಡ ಮೇಲೆ ಮುಂದೆ ಇತ್ಯರ್ಥವಾಗುವವರೆಗೆ ಸಂಬಂಧಪಟ್ಟವರನ್ನು ಅರೆಸ್ಟ್ ಮಾಡುವುದು That is the basic thing that has to be done ಜನರಿಗೆ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಯಾರು ಯಾರು ಅಕ್ಯೂಸ್ಡ್ ಆಗಿದ್ದಾರೆ ಅವರನ್ನು ಅರೆಸ್ಟ್ ಮಾಡುವುದು ಬಹಳ ಮುಖ್ಯ. ಯಾವ ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಂಡಿಲ್ಲ ಅದರ ಬಗ್ಗೆ ವಿವರಣೆ ಕೊಡಬೇಕು. ಮತ್ತೊಂದು ವಿಷಯ ತಾವು ಆಲೋಚನೆ ಮಾಡಬೇಕು. ನಮಗೆ ಅರ್ಥವಾಗುತ್ತದೆ ಅಡ್ಜರ್ನ್‌ಮೆಂಟ್ ಮೋಷನ್ ಡಿಸ್ಪೋಸ್ ಮಾಡದೆ ಪೆಂಡಿಂಗ್ ಇಡುವುದಕ್ಕೆ ಆಗುವುದಿಲ್ಲ. ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದ್ದರೆ ಹೋರಾಟ ಮಾಡಬೇಕಾಗಿಲ್ಲ. ಮುಖ್ಯಮಂತ್ರಿಗಳು ಇಲ್ಲಿಲ್ಲ ಡೆಲ್ಲಿಯಲ್ಲಿದ್ದಾರೆ, ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ನೀವು ಕನ್‌ಸಲ್ಟ್ ಮಾಡಬೇಕು ಎಂಬ ವಿಷಯ ನಮ್ಮ ಮನಸ್ಸಿನಲ್ಲಿ ಇರಬಹುದು. ವಿಚಾರಣೆ ಆಗಬೇಕು, ತನಿಖೆಗೆ ಬರಬೇಕು ಎಂದು ವ್ಯಕ್ತಪಡಿಸಿದಿರಿ. ತಮಗೆ ಒಂದು ಸಲಹೆ ಮಾಡುತ್ತೇನೆ ಮುಖ್ಯಮಂತ್ರಿಗಳವರಲ್ಲಿ ಮಾತನಾಡಿ. ಇಂತಹ ಒಂದು ತ್ವರಿತವಾದ ವಿಷಯ ಸಭೆಯ ಗಮನಕ್ಕೆ ಬಂದಿದೆ, ಚರ್ಚೆಗೆ ಬಂದಿದೆ ಜ್ಯುಡಿಷಿಯಲ್ ಪ್ರೋಬ್ ಮಾಡದೆ ಹೋದರೆ ನೀವು ನಿಷ್ಪಕ್ಷಪಾತವಾಗಿ ಕೇಸ್ ವಿಚಾರಣೆ ಮಾಡಿದರೂ ಜನತೆಯಲ್ಲಿ ವಿಶ್ವಾಸ ಹುಟ್ಟುವುದಿಲ್ಲ. ಈ ದೃಷ್ಟಿಯಿಂದ ಸಮಾಲೋಚನೆ ಮಾಡಿ ಇದರ ಬಗ್ಗೆ ನಿರ್ಣಯವನ್ನು ಸೋಮವಾರದ ದಿವಸ ಪ್ರಕಟಣೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. 302ರ ಪ್ರಕಾರ ಸಂಬಂಧಪಟ್ಟ ಅಕ್ಯೂಸ್ಡ್ ಏನು ಇದ್ದಾರೆ ಅವರ ಮೇಲೆ ಕಾನೂನು ರೀತ್ಯ ಅವರನ್ನು ಕಾಯಿದೆಗೆ ಒಳಪಡಿಸುವ ಕೆಲಸ ಮಾಡಬೇಕು ಎಂಬ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಬಗ್ಗೆ ಸ್ಥಳದಲ್ಲಿ ಸಿ. ಒ. ಡಿ. ಆಫೀಸರು ಈಗಾಗಲೇ ತನಿಖೆ ಮಾಡುತ್ತಿದ್ದಾರೆ. ಇದರ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಮತ್ತು ಯಾವ ರೀತಿ ಮಾಡಬೇಕು ಎನ್ನುವುದನ್ನೂ ಸಧ್ಯದಲ್ಲೇ ವಿಚಾರ ಮಾಡುತ್ತೇವೆ. ಆದುದರಿಂದ ತಾವು ಏನು ವಿವರಗಳನ್ನು ಮಂಡಿಸಿದ್ದೀರಿ ಅವುಗಳ ಬಗ್ಗೆ ವಿಷಯಗಳನ್ನೆಲ್ಲಾ ಪೂರ್ಣವಾಗಿ ತಿಳಿದು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ನನಗೆ ಇನ್ನೂ ಇದರ ಪೂರ್ಣ ಮಾಹಿತಿ ಇಲ್ಲದಿದ್ದರೂ ಮಾನ್ಯ ಸದಸ್ಯರುಗಳು ಇವುಗಳ ಬಗ್ಗೆ ನಡೆದಿರತಕ್ಕ ವಿಧಾನಗಳ ಬಗ್ಗೆ ಎಲ್ಲ ವಿವರಗಳನ್ನೂ ಇಲ್ಲಿ ತಿಳಿಸಿದ್ದಾರೆ. ನಾನು ನಮ್ಮ ಅಧಿಕಾರಿಗಳು ಸ್ಥಳದಲ್ಲಿರುವವರು ಕಾನೂನು ಪ್ರಕಾರ ಕೆಲಸ ಮಾಡಿದ್ದಾರೆಯೋ ಇಲ್ಲವೇ ಎನ್ನುವುದನ್ನು ವಿಚಾರ ಮಾಡಿ ಮುಂದೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಸ್ಥಳದಲ್ಲಿರುವ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಇಷ್ಟು ಹೇಳಿ ಇದನ್ನು ಇಷ್ಟಕ್ಕೇ ಬಿಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅಲ್ಲದೆ ಬರುವ ಸೋಮವಾರ ಇದರ ಬಗ್ಗೆ ಇನ್ನೂ ಹೆಚ್ಚು ವಿವರಗಳು ದೊರಕಿದರೆ ಅದನ್ನೂ ಸಭೆಯ ಮುಂದೆ ಇಡಲು ಪ್ರಯತ್ನ ಮಾಡುತ್ತೇನೆ.

Sri S. BANGARAPPA.—Madam, in view of the assurance given by the Treasury Bench, I withdraw the motion.

The Motion was by leave, withdrawn